KCRO KARNATAKA CHILD RIGHTS OBSERVATORY

# ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ

ಖಾಸಗಿ ಪ್ರಸಾರಕ್ಕಾಗಿ | ವಾರ್ತಾ ಪತ್ರಿಕೆ – ಡಿಸೆಂಬರ್ 2010 | ಸಂಪುಟ 3 ಸಂಚಿಕೆ 2

## ಸಂಪಾದಕೀಯ

ಮಕ್ಕಳ ಹಕ್ಕುಗಳ ಒಡಂಬಡಿಕೆ ಜಾರಿಗೆ ಬಂದು 21 ವರ್ಷಗಳಾಗಿವೆ. ಭಾರತ ಈ ಒಡಂಬಡಿಕೆಗೆ ಸಹಿ ಮಾಡಿ ಮಕ್ಕಳ ಹಕ್ಕುಗಳ ಜಾರಿಗೆ ಬದ್ಧವಾಗಿ 18 ವರ್ಷಗಳಾಗಿವೆ. ಅದರೂ ಮಕ್ಕಳ ಹಕ್ಕುಗಳು ಪ್ರತಿಯೊಬ್ಬರಿಗೂ ತಲುಪುವಂತೆ ಪ್ರಚುರಪಡಿಸುವಲ್ಲಿ ಸರ್ಕಾರವೂ ಸೇರಿದಂತೆ ನಾವೆಲ್ಲರೂ ಸೋತಿದ್ದೇವೆ. ಮಕ್ಕಳ ಬದುಕು, ಅಭಿವೃದ್ಧಿ, ರಕ್ಷಣೆ ಮತ್ತು ಭಾಗವಹಿಸುವಿಕೆಯ ಹಕ್ಕುಗಳನ್ನು ಒಳಗೊಂಡಿರುವ ಒಡಂಬಡಿಕೆ ಮಕ್ಕಳ ಬದುಕಿನ ಎಲ್ಲಾ ಆಯಾಮಗಳಿಗೂ ವಿಸ್ತರಿಸಿದೆ. ಈ ಒಡಂಬಡಿಕೆಯ ಆಶಯಗಳನ್ನು ಸಂಪೂರ್ಣವಾಗಿ ಅರ್ಥೈಸಿಕೊಂಡು, ಅದರ ಪರಿಣಾಮಕಾರಿ ಜಾರಿಗೆ ಪ್ರಯತ್ನಿಸಿದಾಗ ಮಾತ್ರ ಅದು ಅರ್ಥಪೂರ್ಣವಾಗುತ್ತದೆ. ದೇಶದ ಅಭಿವೃದ್ಧಿಯಾಗುತ್ತದೆ. ಮಕ್ಕಳ ಹಕ್ಕುಗಳ ಜಾರಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಅನೇಕ ಯೋಜನೆಗಳನ್ನು ಜಾರಿಗೊಳಿಸುತ್ತಿದ್ದರೂ ಅವು ಹೆಚ್ಚು ಪರಿಣಾಮಕಾರಿಯಾಗಿಲ್ಲ. ರಾಜ್ಯದಲ್ಲಿ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಸ್ಥಾಪಿತವಾಗಿದ್ದರೂ ರಾಜ್ಯದ ಎಲ್ಲಾ ಮಕ್ಕಳಿಗೂ ಎಲ್ಲಾ ಹಕ್ಕುಗಳು ದೊರೆಯುವಂತೆ ಮಾಡಲು ಕಾರ್ಯಪ್ರವೃತ್ತವಾಗುವಂತೆ ಆಯೋಗವನ್ನು ಸಜ್ಜುಗೊಳಿಸಲಾಗಿಲ್ಲ. ಲಕ್ಷಾಂತರ ಮಕ್ಕಳಿಗೆ ಮಕ್ಕಳ ಹಕ್ಕುಗಳು ಇನ್ನೂ ಮರೀಚಿಕೆಯಾಗಿದೆ. ಮಕ್ಕಳ ಒಳಿತಿಗಾಗಿ ಅನೇಕ ಕಾಯ್ದೆಗಳು ಜಾರಿಯಲ್ಲಿದ್ದರೂ ಇನ್ನೂ ಮಕ್ಕಳು ದುಡಿಯುತ್ತಿದ್ದಾರೆ, ಬಾಲ್ಯವಿವಾಹಗಳು ನಡೆಯುತ್ತಲೇ ಇವೆ, ಅನೇಕ ಕಾರಣಗಳಿಗಾಗಿ ಮಕ್ಕಳ ಸಾಗಣೆ ನಡೆಯುತ್ತಲೇ ಇದೆ. ದೇಶಕ್ಕೆ ಸ್ವಾತಂತ್ರ್ಯ ಬಂದು 63 ವರ್ಷಗಳಾದರೂ ಸಂವಿಧಾನದಲ್ಲಿ ಹೇಳಿರುವ ಮೂಲಭೂತ ಹಕ್ಕುಗಳು ಇನ್ನೂ ಎಲ್ಲಾ ಮಕ್ಕಳಿಗೆ ಸಿಕ್ಕಿಲ್ಲ. ಈ ವೈಫಲ್ಯದ ಹೊಣೆ ಎಲ್ಲರದ್ದು. ಇದನ್ನು ಒಪ್ಪಿಕೊಳ್ಳುತ್ತಲೇ ಮುಂಬರುವ ದಿನಗಳಲ್ಲಿ ಎಲ್ಲರೂ ಒಗ್ಗೂಡಿ ಮಕ್ಕಳ ಹಕ್ಕುಗಳ ಜಾರಿಗಾಗಿ ಶ್ರಮಿಸುವ ಆವಶ್ಯಕತೆ ಈಗ ಹಿಂದೆಂದಿಗಿಂತಲೂ ಹೆಚ್ಚಿದೆ.

ರಾಜ್ಯದಲ್ಲಿ ಮಕ್ಕಳ ಹಕ್ಕುಗಳ ಜಾರಿಯನ್ನು ಸ್ವಯಂಸೇವಾ ಸಂಸ್ಥೆಗಳು, ವ್ಯಕ್ತಿಗಳು, ಮಾಧ್ಯಮಗಳು, ಜನಪ್ರತಿನಿಧಿಗಳು ಇನ್ನು ಮೊದಲಾದವರ ಸಹಯೋಗದೊಡನೆ ಪರಿಶೀಲಿಸಲು ಪ್ರಾರಂಭಿಸಿದ ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರಕ್ಕೆ ಎರಡೂವರೆ ವರ್ಷ ತುಂಬುತ್ತಿದೆ. ಈ ಅವಧಿಯಲ್ಲಿ ನಿಗಾ ಕೇಂದ್ರ ಅನೇಕ ಸಂಶೋಧನೆಗಳು, ಕಾರ್ಯಾಗಾರಗಳು, ತರಬೇತಿಗಳ ಜೊತೆಗೆ ರಾಜ್ಯದಲ್ಲಿ ಮಕ್ಕಳ ಹಕ್ಕುಗಳ ಜಾರಿಗಾಗಿ ಮಾಧ್ಯಮ ಮತ್ತು ಶಾಸಕರೊಂದಿಗೆ ನಿರಂತರ ವಕೀಲಿಯಲ್ಲಿ ತೊಡಗಿದೆ.

ಈ ವರ್ಷದಲ್ಲೂ ನಿಗಾ ಕೇಂದ್ರ ಮತ್ತದರ ಸದಸ್ಯರು ಮಕ್ಕಳ ಹಕ್ಕುಗಳನ್ನು ಕುರಿತಂತೆ ಅನೇಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ನಿಗಾ ಕೇಂದ್ರವು ಶಾಸಕರೊಡನೆ ನಡೆಸಿದ ನಿರಂತರ ವಕೀಲಿಯ ಫಲವಾಗಿ ದೇಶದಲ್ಲೇ ಪ್ರಥಮ ಬಾರಿಗೆ ಹಲವಾರು ಶಾಸಕರು ಒಗ್ಗೂಡಿ 'ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳಿಗಾಗಿ ಶಾಸಕರ ವೇದಿಕೆ'ಯನ್ನು ಸ್ಥಾಪಿಸಿಕೊಂಡು ಮಕ್ಕಳ ಪರವಾದ ಅನೇಕ ವಿಚಾರಗಳನ್ನು ಶಾಸನಸಭೆಗಳಲ್ಲಿ ಪ್ರಸ್ತಾಪಿಸುತ್ತಿದ್ದಾರೆ. ಕಳೆದ ಎರಡೂವರೆ ವರ್ಷದ ಅವಧಿಯಲ್ಲಿ ವಿಧಾನಮಂಡಲದ ಅಧಿವೇಶನಗಳಲ್ಲಿ ಶಾಸಕರು ಮಕ್ಕಳ ಪರವಾದ ಎಷ್ಟು ಪ್ರಶ್ನೆಗಳನ್ನು ಕೇಳುತ್ತಿದ್ದಾರೆ ಮತ್ತು ಅವುಗಳಿಗೆ ಸಂಬಂಧಪಟ್ಟ ಇಲಾಖೆಯ ಸಚಿವರುಗಳ ಉತ್ತರಗಳೇನು ಎಂಬುದನ್ನು ಈ ಬಾರಿ ವಿಶ್ಲೇಷಿಸಿದ್ದೇವೆ. ರಾಜ್ಯದ ಆಯವ್ಯಯವನ್ನು ಮಕ್ಕಳ ಹಕ್ಕುಗಳ ಹಿನ್ನೆಲೆಯ ದೃಷ್ಟಿಯಲ್ಲಿ ವಿಶ್ಲೇಷಿಸಿದ್ದೇವೆ.

ಪ್ರತಿಯೊಂದು ಗ್ರಾಮಪಂಚಾಯತಿಗಳು ನವೆಂಬರ್ ತಿಂಗಳಲ್ಲಿ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯನ್ನು ನಡೆಸಬೇಕೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು 2006ರಲ್ಲೇ ಸುತ್ತೋಲೆ ಹೊರಡಿಸಿದೆ. ಕಳೆದ ವರ್ಷ ರಾಜ್ಯದಲ್ಲಿ ಗ್ರಾಮಪಂಚಾಯಿತಿಗಳು ನಡೆಸಿದ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳ ಕುರಿತು ಅಧ್ಯಯನ ನಡೆಸಿದ್ದೇವೆ. ನಿಗಾ ಕೇಂದ್ರವು 2008ರಲ್ಲಿ ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯದಲ್ಲಿ ಹಲವಾರು ಸಂಸ್ಥೆಗಳ ಒಡಗೂಡಿ ನಡೆಸಿದ ಕಾರ್ಯಾಗಾರವು ಹಲವಾರು ಆಯಾಮಗಳಲ್ಲಿ ಪರಿಣಾಮ ಬೀರಿದೆ. 2009ರಲ್ಲಿ ಲೋಕಸಭೆಯಲ್ಲಿ ಅನುಮೋದನೆಗೊಂಡ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ ಕುರಿತಂತೆ ರಾಜ್ಯ ಮಟ್ಟದ ತರಬೇತುದಾರರ ತರಬೇತಿಯನ್ನು ನಿಗಾ ಕೇಂದ್ರವು ಏರ್ಪಡಿಸಿತ್ತು. ಇದರ ಅನುಸರಣೆಯಾಗಿ ಹಲವಾರು ಸ್ವಂಸ್ಥೆಗಳು ಕಾಯ್ದೆಯ ರಾಜ್ಯ ನಿಯಮಗಳ ಕುರಿತು ಜಿಲ್ಲಾ ಮಟ್ಟದಲ್ಲಿ ಚರ್ಚೆ ನಡೆಸಿ ತಮ್ಮ ಸಲಹೆಗಳನ್ನು ಶಿಕ್ಷಣ ಇಲಾಖೆಗೆ ನೀಡಿದ್ದಾರೆ.

ಇದರ ಜೊತೆಯಲ್ಲಿ ಶಿಕ್ಷಕರಿಗೆ ಮಕ್ಕಳ ಹಕ್ಕುಗಳ ಬಗ್ಗೆ ಮಾಹಿತಿ ನೀಡಲು ಕಾರ್ಯಾಗಾರಗಳನ್ನು ಈ ವರ್ಷ ಆಯೋಜಿಸಲಾಗಿತ್ತು. ಹಾಗೆಯೇ ರಾಷ್ಟ್ರೀಯ ಮಕ್ಕಳ ನೀತಿ ಕುರಿತು ಅನೇಕ ಜಿಲ್ಲೆಗಳಲ್ಲಿ ಮಕ್ಕಳೊಡನೆ ಚರ್ಚೆ ನಡೆಸಿ ಅವರ ಸಲಹೆಗಳನ್ನು ಪಡೆಯಲಾಯಿತು. ಇದರ ಜೊತೆಯಲ್ಲಿ ಪತ್ರಿಕೆಗಳು ಮಕ್ಕಳ ಕುರಿತಾದ ಯಾವ ವಿಷಯಗಳ ಮೇಲೆ ವರದಿ ಮಾಡುತ್ತಿವೆ ಮತ್ತು ಎಷ್ಟು ಪ್ರಮಾಣದಲ್ಲಿ ವರದಿ ಮಾಡುತ್ತಿವೆ ಎಂಬುದನ್ನೂ ನಿಗಾ ಕೇಂದ್ರದ ವತಿಯಿಂದ ವಿಶ್ಲೇಷಿಸುತ್ತಿದ್ದೇವೆ. ಮಾಧ್ಯಮ ಮಿತ್ರರನ್ನು ಮಕ್ಕಳ ಪರವಾಗಿಸಲು ಮಕ್ಕಳ ಹಕ್ಕುಗಳ ಕುರಿತಂತೆ ಕಾರ್ಯಾಗಾರವನ್ನು ಏರ್ಪಡಿಸಿ 'ಮಕ್ಕಳ ಹಕ್ಕುಗಳಿಗಾಗಿ ಮಾಧ್ಯಮ ಒಕ್ಕೂಟ'ವನ್ನು ರಚಿಸಲಾಗಿದೆ. ಈ ಎಲ್ಲಾ ಚಟುವಟಿಕೆಗಳನ್ನು ಸಂಕ್ಷಿಪ್ತ ರೂಪದಲ್ಲಿ ಈ ಸಂಚಿಕೆಯಲ್ಲಿ ನೀಡುತ್ತಿದ್ದೇವೆ.

ನಮ್ಮ ಈ ಎಲ್ಲಾ ಚಟುವಟಿಕೆಗಳಿಗೆ ಸಹಕಾರ ನೀಡಿದ ನಿಗಾ ಕೇಂದ್ರದ ಜಾಲದ ಎಲ್ಲಾ ಸದಸ್ಯರಿಗೂ ನಮ್ಮ ವಂದನೆಗಳು. ಕಾಲಕಾಲಕ್ಕೆ ಸಲಹೆಗಳನ್ನು ನೀಡಿದ ಯುನಿಸೆಫ್ ಹೈದರಾಬಾದಿನ ಶ್ರೀ ವಿಕಾಸ್ ವರ್ಮಾರವರಿಗೂ ಮತ್ತು ನಿಗಾ ಕೇಂದ್ರದ ಸಲಹಾ ಮಂಡಳಿ ಸದಸ್ಯರಿಗೂ ನಮ್ಮ ನಮನಗಳು. ನಿಮ್ಮ ಸಲಹೆ, ಸೂಚನೆ ಮತ್ತು ಅಭಿಪ್ರಾಯಗಳಿಗೆ ಸದಾ ಸ್ವಾಗತ.

ವಾಸುದೇವ ಶರ್ಮಾ

### ಪರಿವಿಡಿ

**ಈ ಸಂಚಿಕೆಯಲ್ಲಿ...** ಪುಟ


- ಕರ್ನಾಟಕದ ಮಕ್ಕಳ ಹಕ್ಕುಗಳಿಗಾಗಿ ಶಾಸಕರ ವೇದಿಕೆ 2
- ಸುದ್ದಿಯಲ್ಲಿ ಮಕ್ಕಳು 3
- ವಿಧಾನಸೌಧದಲ್ಲಿ ಮಕ್ಕಳಿದ್ದಾರೆಯೇ? ಜಿಲ್ಲಾವಾರು ಒಟ್ಟು ಪ್ರಶ್ನೆಗಳು ಮತ್ತು ಮಕ್ಕಳ ಕೇಂದ್ರಿತ ಪ್ರಶ್ನೆಗಳು 4
- ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳು: ಆಚರಣೆಯಿಂದ... ಅನುಷ್ಠಾನದತ್ತ... 5
- ಮಕ್ಕಳು ಮತ್ತು ರಾಜ್ಯ ಆಯವ್ಯಯ 6
- ಬಾಲ್ಯ ವಿವಾಹ ಕಾರ್ಯಾಗಾರದ ಪರಿಣಾಮಗಳು 7
- ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾರ್ಯಾಗಾರ 8
- ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಚಟುವಟಿಕೆಗಳನ್ನು ಕುರಿತು ಅನಿಸಿಕೆಗಳು 9
- ನವೆಂಬರ್ 20 ಅಂತಾರಾಷ್ಟ್ರೀಯ ಮಕ್ಕಳ ಹಕ್ಕುಗಳ ದಿನ 10
- ಕರ್ನಾಟಕದ ಮಕ್ಕಳು ಮತ್ತು ಅಂಕಿ ಅಂಶಗಳು 12


unicef | CRT CHILD RIGHTS TRUST | KCRO KARNATAKA CHILD RIGHTS OBSERVATORY

ಸಂಪರ್ಕಕ್ಕಾಗಿ : ಚೈಲ್ಡ್ ರೈಟ್ಸ್ ಟ್ರಸ್ಟ್, 4606, 6ನೇ ಮಹಡಿ, ಹೈಪಾಯಿಂಟ್ 4, ಅರಮನೆ ರಸ್ತೆ, ಬೆಂಗಳೂರು 560001 ದೂ. 080–41138285 email: crtindia@yahoo.co.in




# ಕರ್ನಾಟಕದ ಮಕ್ಕಳ ಹಕ್ಕುಗಳಿಗಾಗಿ ಶಾಸಕರ ವೇದಿಕೆ

ಕರ್ನಾಟಕದ ಮಕ್ಕಳ ಹಕ್ಕುಗಳಿಗಾಗಿ ಶಾಸಕರ ವೇದಿಕೆಯ ದ್ವಿತೀಯ ಮತ್ತು ತೃತೀಯ ಸಭೆಗಳು ಮಕ್ಕಳ ಹಕ್ಕುಗಳ ವಿಚಾರವಾಗಿ ಮುಂದಾಳತ್ವ ವಹಿಸಿದ ಕೆಲವು ಶಾಸಕರ ಗುಂಪಿನಿಂದ ಸಂಘಟಿಸಲ್ಪಟ್ಟಿದ್ದವು. ಮಕ್ಕಳ ಹಕ್ಕುಗಳ ಕುರಿತಾದ ಸಭೆಯು ವಿಧಾನ ಸೌಧದಲ್ಲಿ ನಡೆದಿದ್ದು ಇದೇ ಪ್ರಥಮ ಬಾರಿಯಾಗಿದೆ.

**ಭಾಗವಹಿಸಿದ್ದ ಶಾಸಕರು :**

ಶ್ರೀ. ಮನೋಹರ್ ಮಸ್ಕಿ, ವಿಧಾನ ಪರಿಷತ್ ಸದಸ್ಯರು
ಶ್ರೀ. ವೀರಣ್ಣ ಮತ್ತೀಕಟ್ಟಿ, ಮೇಲ್ಮನೆಯ ಸಭಾಪತಿ
ಶ್ರೀ. ಸಿದ್ದು ಸವದಿ, ವಿಧಾನ ಸಭೆ ಸದಸ್ಯರು
ಕ್ಯಾಪ್ಟನ್ ಗಣೇಶ್ ಕಾರ್ನಿಕ್, ವಿಧಾನ ಪರಿಷತ್ ಸದಸ್ಯರು
ಶ್ರೀ. ಬಸವರಾಜ ಹೊರಟ್ಟಿ, ವಿಧಾನ ಪರಿಷತ್ ಸದಸ್ಯರು
ಶ್ರೀಮತಿ. ಮೋಟಮ್ಮ, ವಿಧಾನ ಪರಿಷತ್ ಸದಸ್ಯರು
ಶ್ರೀ. ಶ್ರೀಕಂಠೇಗೌಡ, ವಿಧಾನ ಪರಿಷತ್ ಸದಸ್ಯರು
ಶ್ರೀ. ಉಗ್ರಪ್ಪ, ಮೇಲ್ಮನೆಯ ವಿರೋಧ ಪಕ್ಷದ ನಾಯಕರು
ಶ್ರೀ. ಎಸ್. ಎಂ. ಆನಂದ್, ವಿಧಾನ ಪರಿಷತ್ ಸದಸ್ಯರು
ಶ್ರೀ. ಶಿವಯೋಗಿ ಸ್ವಾಮಿ, ವಿಧಾನ ಪರಿಷತ್ ಸದಸ್ಯರು
ಶ್ರೀ. ಮಲ್ಲನಗೌಡ ನಾಡಗೌಡ, ವಿಧಾನ ಪರಿಷತ್ ಸದಸ್ಯರು
ಶ್ರೀ. ಮುಖ್ಯಮಂತ್ರಿ ಚಂದ್ರು, ವಿಧಾನ ಪರಿಷತ್ ಸದಸ್ಯರು
ಶ್ರೀ. ಹ್ಯಾರೀಸ್, ವಿಧಾನ ಸಭೆ ಸದಸ್ಯರು

ಶ್ರೀ. ಮನೋಹರ್ ಮಸ್ಕಿರವರು ಸಭೆಯಲ್ಲಿ ಭಾಗವಹಿಸಿದ್ದವರಿಗೆ ಕಾರ್ಯಸೂಚಿ ಬಗ್ಗೆ ತಿಳಿಸಿದರು. ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿಯಲು ಸರ್ಕಾರ ಹಲವಾರು ಕಾರ್ಯಕ್ರಮಗಳು ಹಾಗೂ ಯೋಜನೆಗಳನ್ನು ರೂಪಿಸಿದೆ, ಶಾಸಕರು ರಾಜ್ಯ ಮಕ್ಕಳ ಕ್ರಿಯಾ ಯೋಜನೆಯನ್ನು (2003–10) ಆಳವಾಗಿ ಗಮನಿಸಿದರೆ ಅದರಲ್ಲಿ ಮಕ್ಕಳ ಹಕ್ಕುಗಳ ಪರವಾದ ಹಲವಾರು ವಿಚಾರಗಳಿದ್ದು ಎರಡೂ ಸದನಗಳಲ್ಲಿ ಅವುಗಳ ಬಗ್ಗೆ ಚರ್ಚಿಸಲು ಶಾಸಕರು ಧ್ವನಿ ಎತ್ತಬಹುದು ಹಾಗೂ ಮಕ್ಕಳ ಅಭಿವೃದ್ಧಿಗಾಗಿ ಸೂಕ್ತವಾದ ಕ್ರಮಗಳನ್ನು ತೆಗೆದುಕೊಳ್ಳಲು ಸರ್ಕಾರವನ್ನು ಒತ್ತಾಯಿಸಬಹುದು ಎಂದು ತಿಳಿಸಿದರು.

ಮಸ್ಕಿರವರ ಪ್ರಸ್ತಾವನೆಯಿಂದ ಸಭೆಯಲ್ಲಿ ಭಾಗವಹಿಸಿದ್ದ ಶಾಸಕರು ಮಕ್ಕಳಿಗೆ ಸಂಬಂಧಿಸಿದ ವಿಚಾರಗಳಾದ – ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ, ಮಕ್ಕಳ ಶಿಕ್ಷಣ, ವಲಸೆ, ಹೆಣ್ಣು ಮಗುವಿನ ಶಿಕ್ಷಣ, ಶಾಲಾ ಪರಿಸ್ಥಿತಿಗಳು, ಸರ್ಕಾರದ ಅಭಿವೃದ್ಧಿ ಯೋಜನೆಗಳು, ಅವುಗಳ ಅನುಷ್ಠಾನ ಹಾಗೂ ಉಸ್ತುವಾರಿಯಲ್ಲಿ ಸಂಘ–ಸಂಸ್ಥೆಗಳ ಪಾತ್ರ ಇವುಗಳನ್ನು ಕುರಿತು ಚರ್ಚಿಸಲು ಅನುವು ಮಾಡಿತು.

ಶ್ರೀಯುತ ಎಸ್. ಎಂ. ಆನಂದ್‌ರವರು ಇಂತಹ ಪ್ರಮುಖ ಚರ್ಚೆಗೆ ಬೆರಳೆಣಿಕೆಯಷ್ಟು ಶಾಸಕರು ಭಾಗವಹಿಸಿರುವ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾ ಮುಂಬರುವ ದಿನಗಳಲ್ಲಿ ಮಕ್ಕಳ ಕುರಿತು ಚರ್ಚಿಸಲು ಹೆಚ್ಚಿನ ಸಂಖ್ಯೆಯಲ್ಲಿ ಶಾಸಕರು ಭಾಗವಹಿಸುತ್ತಾರೆಂಬ ಆಶಾಭಾವನೆಯನ್ನು ವ್ಯಕ್ತಪಡಿಸಿದರು. ಮುಖ್ಯಮಂತ್ರಿಯವರ ಮಧ್ಯವರ್ತಿಕೆಯಿದ್ದರೆ ಶಾಸಕರು, ಸಂಬಂಧಪಟ್ಟ ಸಚಿವರು ಮತ್ತು ಅಧಿಕಾರಿಗಳು ಹಾಜರಿದ್ದು, ತಕ್ಷಣ ಕ್ರಮ ತೆಗೆದುಕೊಳ್ಳುತ್ತಾರೆ ಎಂದರು. ಅಲ್ಲದೆ ವೇದಿಕೆಯು ಅಲ್ಪಸಂಖ್ಯಾತರ, ಕಟ್ಟಡ ಕಾರ್ಮಿಕರ ಮತ್ತು ಬಡ ಕುಟುಂಬಗಳ ಮಕ್ಕಳ ಕುರಿತು ಹೆಚ್ಚು ಗಮನ ನೀಡಬೇಕಾದ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಶ್ರೀಯುತ ಕ್ಯಾಪ್ಟನ್ ಗಣೇಶ್ ಕಾರ್ನಿಕ್‌ರವರು ಮಾತನಾಡಿ, 'ಮಕ್ಕಳಿಗಾಗಿ ಮಾಡಿದ ಯಾವುದೇ ಹೂಡಿಕೆಯು ಭವಿಷ್ಯದ ಅಭಿವೃದ್ಧಿಯ ಹೂಡಿಕೆಯಾಗಿರುತ್ತದೆ' ಸಮರ್ಪಕ ಹಾಗೂ ಪರಿಣಾಮಾತ್ಮಕವಾಗಿ ನಿಧಿ ಬಳಕೆಯಾಗುತ್ತಿಲ್ಲ ಹಾಗೂ ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿಯುವಲ್ಲಿ ಕ್ರಮ ತೆಗೆದುಕೊಳ್ಳಬೇಕಾದ ಹಂತಗಳ ಬಗ್ಗೆ ಶಾಸಕರ ವೇದಿಕೆಯು ಯೋಜಿಸಬಹುದು. ಹೊಸ ಯೋಜನೆ, ನೀತಿಗಳನ್ನು ಜಾರಿ ಮಾಡುವ ಬದಲು ಇರುವ ಯೋಜನೆಗಳ ಸಾಮರ್ಥ್ಯವೃದ್ಧಿ ಮಾಡಬೇಕು ಎಂದು ತಿಳಿಸಿದರು.



ಶ್ರೀಯುತ ಸಿದ್ದು ಸವದಿಯವರು ಶಿಕ್ಷಣವು ಮಕ್ಕಳ ಅಭಿವೃದ್ಧಿಗೆ ಪ್ರಮುಖವಾದುದು, ಮಕ್ಕಳ ಶಿಕ್ಷಣದ ಹಕ್ಕನ್ನು ವೇದಿಕೆಯು ಗಂಭೀರವಾಗಿ ಪರಿಗಣಿಸುತ್ತದೆ ಪ್ರತಿ ಮಗುವೂ ಶಾಲೆಗೆ ಹೋಗಲು ಕಾನೂನು ನೆರವಾಗದಿರಬಹುದಾದರೂ ಬಡತನ ನಿವಾರಣೆ ಹಾಗೂ ಆರ್ಥಿಕ ಅಭಿವೃದ್ಧಿಗಾಗಿ ಶ್ರಮಿಸಬೇಕಿದೆ ಎಂದರು.

ಶ್ರೀಯುತ ಬಸವರಾಜ ಹೊರಟ್ಟಿಯವರು, ವೇದಿಕೆಯು ಸಮಸ್ಯೆಗಳನ್ನು ಸುಲಭವಾಗಿ ನಿಭಾಯಿಸಲು ಸ್ಥಳೀಯ ಆಡಳಿತದ ಸಾಮರ್ಥ್ಯವೃದ್ಧಿ ಮಾಡಬೇಕೆಂದರು. ವೇದಿಕೆಯು ಮಕ್ಕಳ ವಿಚಾರಗಳನ್ನು ಗ್ರಾಮ ಪಂಚಾಯತಿಯಲ್ಲಿ ಚರ್ಚಿಸಲು ಹಾಗೂ ಪಂಚಾಯತಿ ಮಟ್ಟದಲ್ಲಿಯೇ ಆ ಸಮಸ್ಯೆಗಳನ್ನು ಸರ್ಕಾರದ ಸಹಾಯದೊಂದಿಗೆ ನಿಭಾಯಿಸಲು ಸಂಘ–ಸಂಸ್ಥೆಗಳನ್ನು ಪ್ರೋತ್ಸಾಹಿಸಬೇಕೆಂದರು.

**ಇತರ ಸಲಹೆಗಳು**

– ಮಕ್ಕಳ ಆದ್ಯತೆಗಳು ಹಾಗೂ ಬೇಡಿಕೆಗಳನ್ನು ಗುರುತಿಸಲು ರಾಜ್ಯದ ವಿವಿಧ ಭಾಗಗಳ ಮಕ್ಕಳು ಶಾಸಕರೊಂದಿಗೆ ಮುಖಾಮುಖಿ ಚರ್ಚೆಯಲ್ಲಿ ಪಾಲ್ಗೊಳ್ಳುವಂತೆ ಮಾಡುವುದು.

- ಮಕ್ಕಳ ಅಭಿವೃದ್ಧಿ ವಿಚಾರಗಳೊಂದಿಗೆ ಮಹಿಳಾ ವಿಚಾರಗಳು ಹಾಗೂ ಬಡತನ ನಿವಾರಣಾ ಕಾರ್ಯಕ್ರಮಗಳೊಂದಿಗೆ ಸಂಬಂಧ ಕಲ್ಪಿಸುವುದು.
- ಸರ್ಕಾರ ಪ್ರಸ್ತುತ ರಾಜ್ಯ ಮಕ್ಕಳ ಕ್ರಿಯಾ ಯೋಜನೆಯ ಪುನರ್ವಿಮರ್ಶೆ ಮಾಡಲು ಹಾಗೂ 2010ರೊಳಗೆ ಮುಂದಿನ ದಶಕಕ್ಕೆ ಕ್ರಿಯಾ ಯೋಜನೆ ತಯಾರಿಸಲು ಬದ್ಧವಾಗಿರಬೇಕು.
- ರಾಜ್ಯ ಮಕ್ಕಳ ಕ್ರಿಯಾ ಯೋಜನೆಯ ಪರಿಣಾಮಕಾರಿ ಉಪಯೋಗಕ್ಕಾಗಿ ಶಾಸಕರು, ಸರ್ಕಾರಿ ಅಧಿಕಾರಿಗಳು, ಸ್ವಯಂಸೇವಾ ಸಂಸ್ಥೆಗಳು ಹಾಗೂ ಮಕ್ಕಳನ್ನೊಳಗೊಂಡ ಒಂದು ಪರಿಶೀಲನಾ ತಂಡ ರೂಪಿಸುವುದು.
- ಮಕ್ಕಳ ವಿಚಾರಗಳನ್ನು, ಅದರಲ್ಲೂ ನಿರ್ದಿಷ್ಟವಾಗಿ ಸಹಸ್ರಮಾನ ಅಭಿವೃದ್ಧಿ ಗುರಿಗಳ ಬಗ್ಗೆ ಕರ್ನಾಟಕವನ್ನು ಗಮನದಲ್ಲಿಟ್ಟುಕೊಂಡು ಶಾಸಕರಿಗೆ ಅರ್ಥೈಸಲು ಯುನಿಸೆಫ್ ಮುಖ್ಯಸ್ಥರನ್ನು ಆಹ್ವಾನಿಸಬಹುದು.

ವಿಧಾನ ಪರಿಷತ್‌ನ ಸಭಾಪತಿಯವರಾದ ಶ್ರೀಯುತ ವೀರಣ್ಣ ಮತ್ತಿಕಟ್ಟಿರವರು ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿಯಲು ಹಾಗೂ ಅದಕ್ಕಾಗಿ ಶ್ರಮಿಸಲು ವೇದಿಕೆ ಬದ್ಧವಾಗಿರುತ್ತದೆಂದು ಚರ್ಚಾಂಶಗಳನ್ನು ಕ್ರೋಡೀಕರಿಸುತ್ತಾ ಹೇಳಿದರು. ಕರ್ನಾಟಕದ ಶಾಸಕರು ಈ ಹೊಸ ಚಿಂತನೆಯನ್ನು ಕೇವಲ ಜನಾಕರ್ಷಣೆ ಅಥವಾ ವಾರ್ಷಿಕ ಚಟುವಟಿಕೆಯಂತೆ ನಡೆಸದೆ ನಿರಂತರ ಪ್ರಕ್ರಿಯೆಯಾಗಿಸಬೇಕೆಂದರು.

**ನಿರ್ಧಾರಗಳು ಹಾಗೂ ಕ್ರಿಯಾ ಯೋಜನೆ ಅಂಶಗಳು:**

1. ಕರ್ನಾಟಕದ ಮಕ್ಕಳ ಪರಿಸ್ಥಿಯನ್ನು ಅರ್ಥಮಾಡಿಕೊಳ್ಳಲು ಕಾಲ-ಕಾಲಕ್ಕೆ ಸಭೆ ಸೇರಬೇಕು. ಮಕ್ಕಳ ಸ್ಥಿತಿ ಕುರಿತು ಶಾಸಕರು ಸ್ಪಷ್ಟ ಚಿತ್ರಣ ಪಡೆಯಲು ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾಕೇಂದ್ರ ಹಾಗೂ ಇನ್ನಿತರೆ ಸ್ವಯಂಸೇವಾ ಸಂಸ್ಥೆಗಳು ನೆರವಾಗಬೇಕು.
2. ವೇದಿಕೆಯು ಎರಡೂ ಸದನಗಳ ಸಭಾಧ್ಯಕ್ಷರ ಅನುಮತಿಯೊಂದಿಗೆ ಮಕ್ಕಳ ಹಕ್ಕುಗಳ ಕುರಿತಾಗಿಯೇ ಒಂದು ದಿನದ ವಿಶೇಷ ಅಧಿವೇಶನ ನಡೆಸಿ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಮಕ್ಕಳ ಕುರಿತಾದ ವರದಿ, ಪ್ರಗತಿ ಮೊದಲಾದವುಗಳನ್ನು ಪಡೆಯುವುದು.
3. ಯಾವುದಾದರೊಂದು ಶುಕ್ರವಾರದ ಮಧ್ಯಾಹ್ನದ ಸಭೆಯಲ್ಲಿ ಶಾಸಕರಿಗೆ ಸಹಸ್ರಮಾನದ ಅಭಿವೃದ್ಧಿ ಗುರಿಗಳ ಹಿನ್ನೆಲೆಯಲ್ಲಿ ಮಕ್ಕಳ ಪರಿಸ್ಥಿತಿಯನ್ನು ಮಂಡಿಸಲು ಯೂನಿಸೆಫ್‌ನ ಮುಖ್ಯಸ್ಥರನ್ನು ಆಹ್ವಾನಿಸುವುದು.
4. ಗ್ರಾಮ ಪಂಚಾಯತಿಗಳು ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯಲು ಸೂಕ್ತ ಕ್ರಮ ಕೈಗೊಳ್ಳುವಂತೆ ವೇದಿಕೆಯು ಒತ್ತಾಯಿಸಬೇಕು ಹಾಗೂ ಗ್ರಾಮ ಪಂಚಾಯತಿಗಳ ವರದಿಗಳನ್ನು ವಿವಿಧ ವಿಭಾಗಗಳಿಂದ ಪಡೆಯಬೇಕು.
5. ವೇದಿಕೆಯ ಸದಸ್ಯರು ರಾಜ್ಯ ಮಕ್ಕಳ ಕ್ರಿಯಾ ಯೋಜನೆ (2003-2010)ಯ ವರದಿಯ ಮೇಲೆ ಎರಡೂ ಸದನಗಳಲ್ಲಿ ಪ್ರಶ್ನೆಗಳನ್ನು ಕೇಳಬೇಕು ಹಾಗೂ ಕ್ರಿಯಾ ಯೋಜನೆಯತ್ತ ಗಮನಹರಿಸುವಂತೆ ಮಾಡಬೇಕು.
6. ವೇದಿಕೆಯ ಪರವಾಗಿ ಬೆಂಗಳೂರು ನಗರದ ಶ್ರೀಯುತ ನೆ.ಲ. ನರೇಂದ್ರ ಬಾಬು, ವಿಧಾನಸಭಾ ಸದಸ್ಯರು (ಮಹಾಲಕ್ಷ್ಮಿ ಲೇಔಟ್) ಇವರ ಕ್ಷೇತ್ರದಲ್ಲಿ ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಯ ಬಗ್ಗೆ ಕ್ರಿಯಾ ಸಂಶೋಧನೆ ಮಾಡುವುದು.

**ಉಪಸಂಹಾರ :** ಮಕ್ಕಳ ಹಕ್ಕಿಗಾಗಿ ಶಾಸಕರ ವೇದಿಕೆ ಎರಡು ಸಭೆಗಳ ಮಕ್ಕಳಿಗಾಗಿ ಇರುವಂತಹ ಹಕ್ಕುಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಗೊಳ್ಳಿಸಬೇಕೆಂದು ಅಭಿಪ್ರಾಯ ಹೊರ ಹೊಮ್ಮಿತು. ಈ ಮೂಲಕ ಸ್ವಯಂಸೇವಾ ಸಂಸ್ಥೆಗಳು ಮಕ್ಕಳ ರಕ್ಷಣೆಯಲ್ಲಿ ತೊಡಗಬೇಕು ಹಾಗು ಶಾಸಕರ ವೇದಿಕೆಯು ತುಂಬ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು ಎಂದೂ ಶಾಸಕರು ಹೇಳಿದರು.

# ಸುದ್ದಿಯಲ್ಲಿ ಮಕ್ಕಳು

ಮುದ್ರಣ ಮಾಧ್ಯಮಗಳಲ್ಲಿ ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ವರದಿ ವಿಚಾರಗಳನ್ನು ಕ್ರೋಢೀಕರಿಸಿ, ವಿಶ್ಲೇಷಿಸಿ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಕೆಸಿಆರ್‌ಒ ಸದಸ್ಯರು ಹಾಗೂ ಮಾಧ್ಯಮ ಮಿತ್ರರಿಗೆ ವರದಿ ರೂಪದಲ್ಲಿ ಕಳುಹಿಸುವ ಪ್ರಕ್ರಿಯೆಯೇ ಸುದ್ದಿಯಲ್ಲಿ ಮಕ್ಕಳು.

**2010 ಜುಲೈ ನಿಂದ ಅಕ್ಟೋಬರ್ ತಿಂಗಳವರೆಗೆ ಆಯ್ದ ಪತ್ರಿಕೆಗಳಲ್ಲಿ ಮಕ್ಕಳ ಸುದ್ದಿಗಳ ವಿಶ್ಲೇಷಣೆ:**

| ಪತ್ರಿಕೆ | ಜುಲೈ | ಆಗಸ್ಟ್ | ಸೆಪ್ಟೆಂಬರ್ | ಅಕ್ಟೋಬರ್ |
|---|---|---|---|---|
| ದ ಹಿಂದು | 26 | 18 | 26 | 17 |
| ದ ಟೈಮ್ಸ್ ಆಫ್ ಇಂಡಿಯಾ | 19 | 24 | 25 | 17 |
| ಡೆಕ್ಕನ್ ಹೆರಾಲ್ಡ್ | 22 | 28 | 16 | 13 |
| ಡೆಕ್ಕನ್ ಕ್ರಾನಿಕಲ್ | 28 | 12 | 22 | 24 |
| ಪ್ರಜಾವಾಣಿ | 24 | 18 | 12 | 16 |
| ಉದಯವಾಣಿ | 22 | 17 | 17 | 16 |
| ಕನ್ನಡಪ್ರಭ | 19 | 13 | 19 | 27 |
| ದ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ | | | | 10 |




ಜುಲೈನಿಂದ ಅಕ್ಟೋಬರ್‌ವರೆಗೆ ಮಾಧ್ಯಮಗಳಲ್ಲಿ ಪ್ರಕಟವಾದಂತಹ ಮಕ್ಕಳ ಹಕ್ಕುಗಳನ್ನು ಕುರಿತಾದ 567 ಸುದ್ದಿಗಳನ್ನು ಸಂಗ್ರಹಿಸಲಾಗಿದೆ. ಪ್ರಸ್ತುತವಾಗಿ ಬೆಂಗಳೂರು ವ್ಯಾಪ್ತಿಯ ಪತ್ರಿಕೆಗಳನ್ನು ಮಾತ್ರವೇ ಗಮನಿಸುತ್ತಿದ್ದು ನಮ್ಮ ಕೆಸಿಆರ್‌ಒ ಸದಸ್ಯರು, ಸಮಾಜಕಾರ್ಯ ವಿದ್ಯಾರ್ಥಿಗಳು ಹಾಗೂ ಇತರರಲ್ಲಿ ಅವರು ಗಮನಿಸುವ ಇನ್ನಿತರೆ ಪತ್ರಿಕೆಗಳಲ್ಲಿ ಮಕ್ಕಳ ಸುದ್ದಿಗಳನ್ನು ನಮ್ಮ ವಿಶ್ಲೇಷಣೆಗೆ ತಲುಪಿಸಲು ವಕೀಲಿ ಮಾಡುತ್ತಿದ್ದೇವೆ.

ಮಾಧ್ಯಮಗಳಲ್ಲಿನ ಮಕ್ಕಳ ಸುದ್ದಿಗಳ ಪ್ರಾಮುಖ್ಯತೆಯನ್ನು ಹೆಚ್ಚು ಪ್ರಚುರಗೊಳಿಸಲು ಹಲವಾರು ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

**ಮಾಧ್ಯಮ ಒಕ್ಕೂಟ**

ಮಕ್ಕಳ ಹಕ್ಕುಗಳ ಒಡಂಬಡಿಕೆಯ ಆಶಯಗಳ ಬಗ್ಗೆ ಮಾಧ್ಯಮ ಮಿತ್ರರಿಗೂ ಹಾಗೂ ಅವರ ಮೂಲಕ ಸಾರ್ವಜನಿಕರಲ್ಲಿ ಹೆಚ್ಚು ಅರಿವು ಮೂಡಿಸುವ ನಿಟ್ಟಿನಲ್ಲಿ' ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರವು ಮಕ್ಕಳ ಹಕ್ಕುಗಳ ಆಧಾರಿತ ಲೇಖನ/ ವರದಿಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲು ಮಾಧ್ಯಮ ಭಾರತಿ, ಭಾರತೀಯ ವಿದ್ಯಾಭವನ ಹಾಗೂ ಯೂನಿಸೆಫ್ ಸಹಯೋಗದೊಂದಿಗೆ ಮಕ್ಕಳ ಹಕ್ಕುಗಳಿಗಾಗಿ 'ಮಾಧ್ಯಮ ಸಮಾಲೋಚನೆ ನಡೆಸಲಾಯಿತು. ಆ ಸಂಬಂಧಿತ ಚರ್ಚೆಯನ್ನು ಉದಯವಾಣಿ ಪತ್ರಿಕೆಯ ಸಂಪಾದಕಿಯಾಗಿದ್ದ ಡಾ.ಆರ್.ಪೂರ್ಣಿಮಾರವರ ನೇತೃತ್ವದಲ್ಲಿ ನಡೆಸಲಾಯಿತು. ಈ ಪ್ರಾಸ್ತಾವಿಕ ಸಮಾಲೋಚನೆಯ ಫಲವಾಗಿ **'ಮಕ್ಕಳ ಹಕ್ಕುಗಳಿಗಾಗಿ ಮೀಡಿಯಾ ಗಿಲ್ಡ್'** ಎಂಬ ಹೊಸ ಕಲ್ಪನೆ ಹೊರಹೊಮ್ಮಿತು.

**ಈ ಮಾಧ್ಯಮ ವಿಶ್ಲೇಷಣೆಗೆ ಅನೇಕರು ತಮ್ಮ ಪ್ರತಿಕ್ರಿಯೆಗಳನ್ನು ನೀಡಿದ್ದಾರೆ. ಮಕ್ಕಳನ್ನು ಕುರಿತು ಮಾಧ್ಯಮಗಳಲ್ಲಿ ಪ್ರಕಟವಾಗುವ ವರದಿ, ಲೇಖನ ಇತ್ಯಾದಿ ಮಾಹಿತಿಗಳಿಗಾಗಿ ಸಂಪರ್ಕಿಸಿ:**
**childinnews@gmail.com**

# ವಿಧಾನಸೌಧದಲ್ಲಿ ಮಕ್ಕಳಿದ್ದಾರೆಯೇ?

## ಕರ್ನಾಟಕ ವಿಧಾನ ಸಭೆ ಮತ್ತು ಪರಿಷತ್ತಿನಲ್ಲಿ ಕೇಳಿಬಂದ ಮಕ್ಕಳ ಕೇಂದ್ರಿತ ಪ್ರಶ್ನೆಗಳು

2008–10ರ ವಿಧಾನಮಂಡಲದ ಎಲ್ಲಾ ಅಧಿವೇಶನಗಳ ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ಅನೇಕ ಅಭಿವೃದ್ಧಿ ವಿಷಯುಗಳು ಚರ್ಚೆಯಾದಂತೆಯೇ, ಗುರುತರ ಆಪಾದನೆ, ಪ್ರಮುಖವಲ್ಲದ ವಿಚಾರಗಳ ಬಗ್ಗೆ ಅನಗತ್ಯ ಚರ್ಚೆ, ವಾಗ್ಯುದ್ಧ, ಸಭಾತ್ಯಾಗ ಮುಂತಾದವುಗಳೂ ನಡೆದವು. ಸುಮಾರು 54 ದಿನಗಳ ಕಾಲ ನಡೆದ ವಿಧಾನಮಂಡಲದ ಕಾರ್ಯಕಲಾಪಗಳಲ್ಲಿ ಬಹು ಮುಖ್ಯವಾದ ಪ್ರಶ್ನೋತ್ತರ ವೇಳೆಯಲ್ಲಿ ಕೇಳಿಬಂದ ವಿವಿಧ ಇಲಾಖೆಗಳ ಮೇಲಿನ ಒಟ್ಟು ಪ್ರಶ್ನೆಗಳ ಸಂಖ್ಯೆ ಸುಮಾರು 7730 (ವಿಧಾನಸಭೆ 4869 ಮತ್ತು ವಿಧಾನಪರಿಷತ್ 2861).

ಇವುಗಳಲ್ಲಿ ಮಕ್ಕಳ ಅಭಿವೃದ್ಧಿ, ಉಳಿವು ಮತ್ತು ರಕ್ಷಣೆಗೆ ಸಂಬಂಧಿಸಿದಂತೆ ಕೇಳಿಬಂದ ಪ್ರಶ್ನೆಗಳು ಕೇವಲ 300. (ವಿಧಾನಸಭೆ 183 ಮತ್ತು ವಿಧಾನಪರಿಷತ್ 117). ಅಂದರೆ ಒಟ್ಟು ಪ್ರಶ್ನೆಗಳ ಶೇಕಡಾ ನಾಲ್ಕರಷ್ಟು ಮಾತ್ರ.

| ಕ್ರ.ಸಂ. | ಪಕ್ಷ | ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು | ಒಟ್ಟು ಪ್ರಶ್ನೆಯ % |
|---|---|---|---|---|
| 1 | ಕಾಂಗ್ರೆಸ್ | 3578 | 138 | 3.86 |
| 2 | ಬಿ.ಜೆ.ಪಿ. | 1629 | 74 | 4.54 |
| 3 | ಜೆ.ಡಿ.ಎಸ್. | 1797 | 53 | 2.95 |
| 4 | ಪಕ್ಷೇತರ | 461 | 26 | 5.64 |
| 5 | ಜೆ.ಡಿ.ಯು. | 265 | 9 | 3.40 |
| | **ಒಟ್ಟು** | **7730** | **300** | **3.88** |

## ಜಿಲ್ಲಾವಾರು ಒಟ್ಟು ಪ್ರಶ್ನೆಗಳು ಮತ್ತು ಮಕ್ಕಳ ಕೇಂದ್ರಿತ ಪ್ರಶ್ನೆಗಳು – ವಿಧಾನಸಭೆ

ಎಲ್ಲಾ ಇಲಾಖೆಗಳಿಗೆ ಸಂಬಂಧಿಸಿದಂತೆ ಜಿಲ್ಲಾವಾರು ಪ್ರಶ್ನೆಗಳನ್ನು ಪರಿಗಣಿಸಿದಾಗ ಅತೀ ಹೆಚ್ಚು ಪ್ರಶ್ನೆಗಳನ್ನು ಕೇಳಿರುವವರು ಬೆಂಗಳೂರು ನಗರ ಜಿಲ್ಲೆಯ ಶಾಸಕರು (681 ಪ್ರಶ್ನೆಗಳು). ನಂತರದ ಸ್ಥಾನದಲ್ಲಿ ಬೀದರ್ ಜಿಲ್ಲಾ ಶಾಸಕರು (364 ಪ್ರಶ್ನೆಗಳು) ಮತ್ತು ಬಿಜಾಪುರ ಜಿಲ್ಲಾ ಶಾಸಕರು (338 ಪ್ರಶ್ನೆಗಳು) ಇದ್ದಾರೆ.

ಇನ್ನು ಜಿಲ್ಲಾವಾರು ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಪರಿಗಣಿಸಿದರೆ, ಅತೀ ಹೆಚ್ಚು ಮಕ್ಕಳ ಕೇಂದ್ರಿತ ಪ್ರಶ್ನೆಗಳನ್ನು ಕೇಳಿರುವುದು ಬೆಂಗಳೂರು ನಗರ ಜಿಲ್ಲಾ ಶಾಸಕರುಗಳು (33 ಪ್ರಶ್ನೆಗಳು). ನಂತರ ಸ್ಥಾನದಲ್ಲಿ ಬೀದರ್ (19 ಪ್ರಶ್ನೆಗಳು) ಮತ್ತು ಬಿಜಾಪುರ ಜಿಲ್ಲಾ ಶಾಸಕರಿದ್ದಾರೆ (18 ಪ್ರಶ್ನೆಗಳು).

ನಾಮಾಂಕಿತ ಸದಸ್ಯರನ್ನೂ ಒಳಗೊಂಡು 5 ಜಿಲ್ಲೆಗಳ ಶಾಸಕರು ಮಕ್ಕಳ ಕುರಿತಾದ ಯಾವುದೇ ಪ್ರಶ್ನೆಗಳನ್ನು ಈ ಅಧಿವೇಶನಗಳ ಅವಧಿಯಲ್ಲಿ ಕೇಳಿಲ್ಲ. ಪ್ರಾಯಶಃ ಆ ಜಿಲ್ಲೆಗಳಲ್ಲಿ ಮಕ್ಕಳಿಗೆ ಯಾವುದೇ ಸಮಸ್ಯೆಗಳು ಇಲ್ಲವೇನೋ?! ಅಥವಾ ಈ ಶಾಸಕರುಗಳಿಗೆ ಮಕ್ಕಳ ಸಮಸ್ಯೆಗಳ ಕುರಿತು ಅರಿವಿಲ್ಲದಿರಬಹುದು.



### ವಿಧಾನಸೌಧದಲ್ಲಿ ಮಕ್ಕಳ ವಿಚಾರ. 2008-10

| ಕ್ರ.ಸಂ. | ಜಿಲ್ಲೆ | ಶಾಸಕರ ಸಂಖ್ಯೆ | ಒಟ್ಟು ಪ್ರಶ್ನೆಗಳು | ಮಕ್ಕಳ ಕೇಂದ್ರಿತ ಪ್ರಶ್ನೆಗಳು |
|---|---|---|---|---|
| 1 | ನಾಮಾಂಕಿತ | 1 | 5 | 0 |
| 2 | ಗದಗ | 4 | 9 | 0 |
| 3 | ಕೊಡಗು | 2 | 22 | 0 |
| 4 | ಹಾವೇರಿ | 6 | 26 | 0 |
| 5 | ದಾವಣಗೆರೆ | 8 | 27 | 0 |
| 6 | ಬೆಂಗಳೂರು ಗ್ರಾ | 5 | 38 | 0 |
| 7 | ಚಿಕ್ಕಮಗಳೂರು | 5 | 48 | 1 |
| 8 | ಚಿತ್ರದುರ್ಗ | 6 | 48 | 2 |
| 9 | ಧಾರವಾಡ | 7 | 49 | 2 |
| 10 | ಬಳ್ಳಾರಿ | 9 | 50 | 2 |
| 11 | ಕೋಲಾರ | 6 | 67 | 2 |
| 12 | ಬೆಳಗಾಂ | 18 | 79 | 3 |
| 13 | ಉತ್ತರ ಕನ್ನಡ | 6 | 113 | 3 |
| 14 | ರಾಯಚೂರು | 6 | 118 | 4 |
| 15 | ಕೊಪ್ಪಳ | 5 | 137 | 4 |
| 16 | ಉಡುಪಿ | 5 | 143 | 5 |
| 17 | ಚಾಮರಾಜನಗರ | 5 | 146 | 5 |
| 18 | ಗುಲ್ಬರ್ಗ | 13 | 162 | 6 |
| 19 | ರಾಮನಗರ | 4 | 163 | 6 |
| 20 | ಬಾಗಲಕೋಟೆ | 7 | 164 | 6 |
| 21 | ಮೈಸೂರು | 11 | 189 | 8 |
| 22 | ಶಿವಮೊಗ್ಗ | 7 | 205 | 8 |
| 23 | ಮಂಡ್ಯ | 7 | 237 | 8 |
| 24 | ಚಿಕ್ಕಬಳ್ಳಾಪುರ | 5 | 274 | 8 |
| 25 | ಹಾಸನ | 7 | 291 | 9 |
| 26 | ದಕ್ಷಿಣ ಕನ್ನಡ | 8 | 309 | 10 |
| 27 | ತುಮಕೂರು | 11 | 316 | 11 |
| 28 | ಬಿಜಾಪುರ | 8 | 338 | 18 |
| 29 | ಬೀದರ್ | 6 | 364 | 19 |
| 30 | ಬೆಂಗಳೂರು ನ | 27 | 681 | 33 |
| | **ಒಟ್ಟು** | **225** | **4869** | **183** |

# ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳು ಆಚರಣೆಯಿಂದ... ಅನುಷ್ಠಾನದತ್ತ...

**ನಿಮ್ಮ ಗ್ರಾಮ ಪಂಚಾಯಿತಿಯಲ್ಲಿ ಮಕ್ಕಳಿದ್ದಾರೆಯೇ..?** ಎಂದು ಕೇಳಿದಾಗ ಗ್ರಾಮಪಂಚಾಯಿತಿಯಲ್ಲಿ ಮಕ್ಕಳಿಗೇನು ಕೆಲಸ ಅವರು ಶಾಲೆಯಲ್ಲೋ, ಮನೆಯಲ್ಲೋ ಇರ್ತಾರೆ ಎಂದು ಹೇಳಿದ್ದು ಕೊಂಡೇನಹಳ್ಳಿ ಗ್ರಾಮ ಪಂಚಾಯಿತಿಯ ಕಾರ್ಯಾಗಾರದಲ್ಲಿ.

ಮಕ್ಕಳನ್ನು ಕುರಿತು – ಮಕ್ಕಳ ಶಿಕ್ಷಣ, ಆರೋಗ್ಯ, ರಕ್ಷಣೆ, ಮನೋವಿಕಾಸ, ಅಂಗವಿಕಲತೆ ತಡೆ, ಮಕ್ಕಳ ಪೌಷ್ಟಿಕಾಂಶ ವೃದ್ಧಿ, ಮಕ್ಕಳ ಮದುವೆ ತಡೆಯುವುದು, ಮಕ್ಕಳನ್ನು ದುಡಿಮೆಗೆ ಹಚ್ಚದಿರುವುದೇ ಮೊದಲಾದ ವಿಚಾರಗಳ ಬಗ್ಗೆ ಗ್ರಾಮ ಪಂಚಾಯಿತಿ ಸಭೆಗಳಲ್ಲಿ, ಗ್ರಾಮಸಭೆಯಲ್ಲಿ ಚರ್ಚೆ ಆಗುತ್ತದೇನು? ಈ ಚರ್ಚೆಗಳಾಗಿ ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಏನಾದರೂ ಪರಿಹಾರ ಕಂಡುಕೊಳ್ಳುತ್ತಾರೇನು? ಗ್ರಾಮ ಸಭೆಯಲ್ಲಿ ಮಕ್ಕಳಿಗೂ ಭಾಗವಹಿಸಲು ಅವರ ವಿಚಾರಗಳನ್ನು ಮಂಡಿಸಲು ಎಲ್ಲ ಕಡೆ ಅವಕಾಶಗಳಿವೆಯೇನು? ಈ ಎಲ್ಲಾ ಪ್ರಶ್ನೆಗಳಿಗೆ ಸಾಮಾನ್ಯವಾಗಿ ಬರುವ ಉತ್ತರ 'ಇಲ್ಲ' ಎಂಬುದೇ. ಹೀಗಾಗಿ ಮಕ್ಕಳು ಪಂಚಾಯಿತಿಗಳಿಂದ ಬಹಳ ದೂರದಲ್ಲಿದ್ದಾರೆ ಎಂದು ಹೇಳಬಹುದು.

ಮಕ್ಕಳು ಶಿಕ್ಷಕರ ಬಳಿ ತಮ್ಮ ಅಭಿಪ್ರಾಯ, ಸಮಸ್ಯೆಗಳನ್ನು ಹೇಳಿಕೊಳ್ಳುವಂತಹ ಮಕ್ಕಳ ಸ್ನೇಹಿ ವಾತಾವರಣ ಶಾಲೆಗಳನ್ನಿನ್ನೂ ಬಂದಿಲ್ಲ. ದೊಡ್ಡವರು ಮಕ್ಕಳ ಬಗ್ಗೆ ಯೋಚಿಸುವುದನ್ನೇ ಬಿಟ್ಟಿದ್ದಾರೆ. ಗ್ರಾಮ ಪಂಚಾಯಿತಿಯವರು ಮಕ್ಕಳನ್ನೇ ಮರೆತು ಹೋಗಿದ್ದಾರೆ. ಹಾಗಾದರೆ ಮಕ್ಕಳು ಸಮಸ್ಯೆಗಳನ್ನು ಹೇಳುವುದು ಎಲ್ಲಿ? ತಮ್ಮ ಹಿರಿಯರ ಜೊತೆ ತಮ್ಮ ಅಭಿಪ್ರಾಯಗಳನ್ನು ಹೇಳುವಂತಹ ಅವಕಾಶಗಳೇ ನಮ್ಮಲ್ಲಿ ಎಲ್ಲೂ ಕಲ್ಪಿಸಿಲ್ಲ ಎಂದೇ ಹೇಳಬಹುದು. ಇಂತಹ ವಿಚಾರಗಳನ್ನು ಸರ್ಕಾರದ ಮುಂದೆ ಹಂಚಿಕೊಂಡಾಗ ಕರ್ನಾಟಕ ಸರ್ಕಾರ ದೇಶದಲ್ಲೇ ಪ್ರಥಮ ಬಾರಿಗೆ ಪ್ರತಿ ವರ್ಷ ನವೆಂಬರ್ ತಿಂಗಳಲ್ಲಿ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳನ್ನು ನಡೆಸಬೇಕೆಂದು ಸುತ್ತೋಲೆ ಹೊರಡಿಸಿದೆ. (ಸುತ್ತೋಲೆ ಸಂಖ್ಯೆ : ಗ್ರಾಅಪ 367 ಗ್ರಾಪಂಮ 2006 ದಿನಾಂಕ 18–9–2006 ಮತ್ತು ಗ್ರಾಅಪ 638 ಗ್ರಾಪಂಮ 2007 ದಿನಾಂಕ 20–10–2007).

ಈ ಸುತ್ತೋಲೆಯ ಒಂದು ಸಾಧನವಾಗಿ ಬಳಸಿಕೊಂಡು 2006ರಿಂದ ಕರ್ನಾಟಕದ ಅನೇಕ ಗ್ರಾಮ ಪಂಚಾಯತಿಗಳು ತಮ್ಮ ವ್ಯಾಪ್ತಿಯಲ್ಲಿರುವ ಹಳ್ಳಿಗಳ ಮಕ್ಕಳ ಬದುಕು, ರಕ್ಷಣೆ, ಅಭಿವೃದ್ಧಿ ಮತ್ತು ಭಾಗವಹಿಸುವಿಕೆಯ ಸ್ಥಿತಿಗತಿಯನ್ನು ಅಂಕಿ ಸಂಖ್ಯೆಗಳ ಮತ್ತು ವಾಸ್ತವ ಸನ್ನಿವೇಶಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಿದ್ದಾರೆ. ಈ ವಿಶ್ಲೇಷಣೆಯನ್ನು ಆಧರಿಸಿ ಮಕ್ಕಳಿಗಾಗಿ ಉತ್ತಮ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಇಂತಹ ವಿಶ್ಲೇಷಣಾ ಪ್ರಕ್ರಿಯೆಯಲ್ಲಿ ಗ್ರಾಮ ಪಂಚಾಯತಿಗಳ ಸಿಬ್ಬಂದಿ, ಚುನಾಯಿತ ಸದಸ್ಯರು, ಮಕ್ಕಳ ಬಗ್ಗೆ ಕಾಳಜಿಯುಳ್ಳ ಗ್ರಾಮಸ್ಥರು, ಮಕ್ಕಳಿಗಾಗಿ ಸೇವೆ ಸಲ್ಲಿಸುತ್ತಿರುವ ಪಂಚಾಯತಿ ಮಟ್ಟದ ವಿವಿಧ ಇಲಾಖೆಗಳ ಪ್ರತಿನಿಧಿಗಳು, ಹಾಗೂ ಪೋಷಕರು ಸೇರಿದಂತೆ ಮಕ್ಕಳೂ ಭಾಗವಹಿಸುತ್ತಿರುವುದು ವಿಶೇಷ.

ಕಳೆದ ಮೂರ್‍ನಾಲ್ಕು ವರ್ಷಗಳಲ್ಲಿ ರಾಜ್ಯದ ಹಲವು ಪಂಚಾಯತಿಗಳಲ್ಲಿ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆಗಳು ಯಶಸ್ವಿಯಾಗಿ ನಡೆಯಲು ಬಾಲಕಾರ್ಮಿಕ ಪದ್ಧತಿ ವಿರೋಧಿ ಆಂದೋಲನದ ಸದಸ್ಯ ಸಂಸ್ಥೆಗಳು ಹಾಗೂ ವಿವಿಧ ಸ್ಥಳೀಯ ಸ್ವಯಂಸೇವಾ ಸಂಘಟನೆಗಳು ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದರಿಂದ ಎಂದು ಹೇಳಬಹುದು.

ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯನ್ನು ನಡೆಸಬೇಕೆಂಬ ಸುತ್ತೋಲೆ ಹೊರಡಿಸಿ ನಾಲ್ಕು ವರ್ಷಗಳು ಕಳೆದರೂ ರಾಜ್ಯದ ಅನೇಕ ಗ್ರಾಮ ಪಂಚಾಯತಿಗಳಿಗೆ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯ ಸುತ್ತೋಲೆಯ ಬಗ್ಗೆಯಾಗಲಿ, ಅದನ್ನು ನಡೆಸುವುದರ ವಿಧಾನವಾಗಲಿ ತಿಳಿಯದಿರುವ ಪರಿಸ್ಥಿತಿಯನ್ನೂ ಕಾಣಬಹುದು. ಗ್ರಾಮದ ಅಭಿವೃದ್ಧಿಯಲ್ಲಿ ಮಕ್ಕಳ ವಿಚಾರಗಳು ಸೇರಿರುತ್ತವೆ ಎಂಬುದು ಬಹಳ ಜನರಿಗೆ ತಿಳಿದೇ ಇಲ್ಲ. ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳನ್ನು ಕೇವಲ ಆಚರಣೆಗೆ ಆಯೋಜಿಸಿ ಮಕ್ಕಳನ್ನು ಕರೆಸಿ ಸಿಹಿ ತಿಂಡಿ ಹಂಚಿ ಮಕ್ಕಳನ್ನು ಕಳುಹಿಸಿಬಿಟ್ಟಿರುವ ನಿದರ್ಶನಗಳು ಕೆಲವು ಕಡೆ ಕಂಡುಬಂದಿವೆ.

ನಮ್ಮಲ್ಲಿ ಅಭಿವೃದ್ಧಿ ಎಂದರೆ ಕೇವಲ ಭೌದ್ಧಿಕ ಅಂಶಗಳು ಮಾತ್ರ ಎಂಬ ಮನೋಭಾವ ಇನ್ನೂ ಬದಲಾಗಿಲ್ಲ. ಸಹಸ್ರಮಾನದ ಅಭಿವೃದ್ಧಿ ಗುರಿಗಳ ಸೂಚ್ಯಾಂಕಗಳಾದ ಶಿಶುಮರಣ ಪ್ರಮಾಣ, ತಾಯಂದಿರ ಮರಣ ಪ್ರಮಾಣ, ಪೌಷ್ಟಿಕಾಂಶದ ಸ್ಥಿತಿಗತಿ, ಶಾಲೆಗೆ ದಾಖಲಾದ ಮಕ್ಕಳು ಶಾಲಾ ಬಿಟ್ಟ ಮಕ್ಕಳು, ಬಾಲ್ಯವಿವಾಹ, ಬಾಲಕಾರ್ಮಿಕ ಪದ್ಧತಿ, ಲಿಂಗ

"ನನಗೆ ಮಕ್ಕಳ ಗ್ರಾಮ ಸಭೆ"ಯ ಬಗ್ಗೆ ಸರಿಯಾಗಿ ಗೊತ್ತಿರಲಿಲ್ಲ. ಏನೋ ಕಾರ್ಯದರ್ಶಿ ಹೇಳಿದರೆಂದು ತಿಳಿದು ಇಲ್ಲಿಗೆ ಬಂದೆ. ಇಲ್ಲಿನ ವಿದ್ಯಮಾನಗಳನ್ನು. ಗಮನಿಸಿ ಅಧಿಕಾರಿಗಳು ನೀಡಿದ ಮಾಹಿತಿಗಳನ್ನು ಕೇಳಿದಾಗ ಇದಕ್ಕೆ ಎಷ್ಟೊಂದು ಮಹತ್ವ ಇದೆ. ಇದರಲ್ಲಿ ನಮ್ಮ ಪಾತ್ರ ಏನು ಎಂಬುದು ತಿಳಿಯಿತು. ಮಕ್ಕಳಿಗೆ ಗೌರವ ನೀಡಿ ನಾವು ಮಕ್ಕಳ ಪರವಾದ ಕೆಲಸಗಳನ್ನು ಇನ್ನು ಮುಂದೆ ಮಾಡುತ್ತೇವೆ. ಮುಂದಿನ ದಿನಗಳಲ್ಲಿ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮ ಸಭೆಗಳನ್ನು ಅರ್ಥಪೂರ್ಣವಾಗಿ ಮಾಡುತ್ತೇವೆಂದು ತಿಳಿಸಿ "ಮಕ್ಕಳ ಗ್ರಾಮ ಸಭೆ" ಎಂದರೆ ಏನು ಎಂಬುದು ಈಗ ಗೊತ್ತಾಯ್ತು ಎಂದು ದಾವಣಗೆರೆ.ತಾ. ಐಗೂರು ಗ್ರಾಮ ಪಂಚಾಯತ್‌ನ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಬಸವರಾಜ ನಾಯ್ಕ್ ನುಡಿದದ್ದು ಯುನಿಸೆಫ್/ನೊರಾಡ್ ಯೋಜನೆ ಮತ್ತು ಸ್ವಯಂಸೇವಾ ಸಂಸ್ಥೆ(ಡಾನ್ ಬಾಸ್ಕೋ) ಆಯೋಜಿಸಿದ್ದ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆ ಕಾರ್ಯಕ್ರಮದಲ್ಲಿ.

**(ಮಾಹಿತಿ: ಧನಂಜಯ, ಬದುಕು ಸಂಸ್ಥೆ, ಮೈಸೂರು)**

ಪ್ರಮಾಣದಂತಹ ಅಭಿವೃದ್ಧಿ ಮಾಪಕಗಳ ಪರಿಶೀಲನೆ ಹಳ್ಳಿ ಮಟ್ಟದಲ್ಲಿ ಜರುಗಿದಾಗ ಮಾತ್ರ ಅಭಿವೃದ್ಧಿಯ ನಿಜವಾದ ಅರ್ಥವನ್ನು ಕಾಣಬಹುದು. ಇಂತಹ ಮಕ್ಕಳ ವಿಚಾರಗಳಿಗೆ ವೇದಿಕೆ ನಮ್ಮ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳು ಆಗಬೇಕು.

ಈ ವಿಚಾರಗಳು ಸಾಕಷ್ಟು ಜನರಿಗೆ ಗೊತ್ತಿಲ್ಲ. ಇವುಗಳನ್ನು ಪಸರಿಸುವ ಜವಾಬ್ದಾರಿ ಪ್ರತಿಯೊಬ್ಬರದ್ದು. ಇಂತಹ ಕೆಲಸಗಳನ್ನು ಕೆಲವು ಸಂಘ ಸಂಸ್ಥೆಗಳು ಮಾತ್ರ ಮಾಡುತ್ತಿವೆ. ಎಲ್ಲಿ ಪ್ರಚಾರ, ಅನುಸರಣೆ ಆಗುತ್ತಿವೆಯೋ ಅಂತಹೆಡೆಗಳಲ್ಲಿ ಹಲವಾರು ಪರಿಣಾಮಕಾರಿ ಬದಲಾವಣೆಗಳು ಕಂಡುಬಂದಿವೆ. ಮಕ್ಕಳ ಗ್ರಾಮಸಭೆನಾ...? ಎಂದು ಕಡೆಗಣಿಸಿದ್ದ ಎಷ್ಟೋ ಮಂದಿ ಇದರ ಮಹತ್ವವನ್ನು ತಿಳಿದು ತಮ್ಮ ಅಭಿಪ್ರಾಯಗಳನ್ನು ಬದಲಿಸಿಕೊಂಡಿದ್ದಾರೆ. ತಮ್ಮ ಕಾರ್ಯವ್ಯಾಪ್ತಿಯಲ್ಲಿ ಮಕ್ಕಳ ವಿಚಾರಗಳನ್ನು ಸೇರಿಸಿಕೊಂಡಿದ್ದಾರೆ.

ಒಮ್ಮೆ ಒಂದು ಗ್ರಾಮ ಪಂಚಾಯಿತಿ ನಾಮಕಾವಸ್ಥೆಗೆ ಒಂದು ಬಾರಿಯೋ ಎರಡು ಬಾರಿಯಲ್ಲಿ ಮಕ್ಕಳ ಹಕ್ಕುಗಳ ವಿಶೇಶ ಗ್ರಾಮ ಸಭೆ ಪ್ರಯತ್ನ ಮಾಡಿ ಸುಮ್ಮನಾದರೆ ಸಾಲದು. ನಿರಂತರವಾಗಿ ಇದರ ಅನುಸರಣೆ ಮಾಡುತ್ತಲೇ ಇರಬೇಕು. ಹಾಗಾದಾಗ ಮಾತ್ರ ಮಕ್ಕಳ ಬದುಕು, ರಕ್ಷಣೆ, ವಿಕಾಸ, ಭಾಗವಹಿಸುವಿಕೆ ಹಕ್ಕುಗಳು ಗ್ರಾಮೀಣ ಮಟ್ಟದ ಮಕ್ಕಳಿಗೂ ತಲುಪಿಸಲು ಸಾಧ್ಯವಾಗುತ್ತಿದೆ.

'ಏನಪ್ಪಾ ಮಕ್ಕಳ ಗ್ರಾಮಸಭೆ ಅಂದರೆ ಇಷ್ಟೆಲ್ಲಾ ವಿಚಾರಗಳನ್ನು ತಿಳಿಬೇಕಾ? ಈ ವಿಚಾರಗಳು ನಮಗೆ ಮೊದಲು ತಿಳಿದಿರಲಿಲ್ಲ. ಇನ್ನು ಮುಂದೆ ಇನ್ನೂ ಚೆನ್ನಾಗಿ ಮಕ್ಕಳ ಗ್ರಾಮಸಭೆಯನ್ನು ಮಾಡ್ತೀವಿ. ತುಂಬಾ ಧನ್ಯವಾದ ರೀ' ಎಂದು ಹೇಳಿದ್ದು ಮುಧೋಳ್ ತಾಲೂಕಿನ ಬೆಳಗಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರು.

'ಮಕ್ಕಳು ಅವರಿಗೆ ಏನು ತಿಳಿತೈತೆ ಬಿಡು ಅಂದುಕೊಂಡಿದ್ವಿ. ಆದ್ರೆ ಅದು ತುಂಬಾ ಸುಳ್ಳು ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯಲ್ಲಿ ಅವ್ರು ಮಾತಾಡಿದ ವಿಚಾರಗಳು ದೊಡ್ಡವರು ತಲೆ ತಗ್ಗಿಸುವಂತಿತ್ತು' ಎಂದು ಹೇಳಿದ್ದು ರಾಯಬಾಗ್ ತಾಲೂಕಿನ ಮೇಖಳಿ ಗ್ರಾಮದ ಕಾರ್ಯದರ್ಶಿಗಳು.

# ಮಕ್ಕಳು ಮತ್ತು ಆಯವ್ಯಯ

ಕರ್ನಾಟಕ ರಾಜ್ಯದ 2008 ರಿಂದ 2010ರ ಆಯವ್ಯಯವನ್ನು ಗಮನಿಸಿದರೆ, ಸರಾಸರಿ ಶೇಕಡಾ 15ರಷ್ಟು ಹಣವನ್ನು ಮಕ್ಕಳ ಕುರಿತಾದ ಕಾರ್ಯಕ್ರಮಗಳಿಗೆ ಮೀಸಲಿಡಲಾಗಿದೆ. ಹಿಂದಿನ ವರ್ಷಗಳಿಗೆ ಹೋಲಿಸಿದರೆ ಮಕ್ಕಳ ಉಳಿವು, ಅಭಿವೃದ್ಧಿ, ರಕ್ಷಣೆ ಕುರಿತಂತೆ ಮೀಸಲಿಟ್ಟ ಹಣದ ಪ್ರಮಾಣ ಹೆಚ್ಚಳವಾಗಿರುವುದು ತುಸು ಸಮಾಧಾನ ತರುವ ವಿಷಯವಾಗಿದೆ (ಕಳೆದ ವರ್ಷದ ಸರಾಸರಿ ಶೇ. 13ರಷ್ಟಿತ್ತು.). ಈ ಬಾರಿ ಸಮಗ್ರ ಶಿಶು ಅಭಿವೃದ್ಧಿ ಯೋಜನೆ, ಸಮಗ್ರ ಮಕ್ಕಳ ರಕ್ಷಣಾ ಯೋಜನೆ, ಭಾಗ್ಯಲಕ್ಷ್ಮಿ ಯೋಜನೆ ಇವೇ ಮೊದಲಾದವುಗಳಿಗೆ ಕಳೆದ ವರ್ಷಗಳಿಗಿಂತ ಈ ಬಾರಿ ಹೆಚ್ಚು ಹಣವನ್ನು ಮೀಸಲಿಡಲಾಗಿದೆ.




| ವರ್ಷ | ಆರೋಗ್ಯ | % | ಅಭಿವೃದ್ಧಿ | % | ಶಿಕ್ಷಣ | % | ರಕ್ಷಣೆ | % | ಒಟ್ಟು | ಶೇಕಡಾ ಒಟ್ಟು |
|---|---|---|---|---|---|---|---|---|---|---|
| 2008–09 | 3,776 | 0.44 | 89,866 | 10.43 | 7,65,229 | 88.85 | 2,403 | 0.28 | 8,61,274 | 14.29 |
| 2009–10 | 3,508 | 0.41 | 1,05,511 | 12.47 | 7,34,238 | 86.78 | 2,843 | 0.34 | 8,46,100 | 14.59 |
| 2010–11 | 6,384 | 0.65 | 1,38,191 | 14.14 | 8,25,214 | 84.42 | 7,686 | 0.79 | 9,77,475 | 16.38 |

# ‘ಕರ್ನಾಟಕದಲ್ಲಿ ಬಾಲ್ಯ ವಿವಾಹ’ ಅಧ್ಯಯನ ಮತ್ತು ವಕೀಲಿ ಕಾರ್ಯಾಗಾರ ಮತ್ತು ಪರಿಣಾಮಗಳು

ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಪರವಾಗಿ ರಾಜ್ಯದಲ್ಲಿ ಆಗುತ್ತಿರುವ ಬಾಲ್ಯವಿವಾಹಗಳನ್ನು ಕುರಿತು ಅಧ್ಯಯನವನ್ನು ಶ್ರೀಮತಿ ನೀನಾ ನಾಯಕ್ ಅವರು ನಡೆಸಿದರು. ಅವರ ಸಲಹೆಯಂತೆ ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯ, ಹ್ಯೂಮನ್ ರೈಟ್ಸ್ ಲಾ ನೆಟ್ ವರ್ಕ್ ಹಾಗು ಇನ್ನಿತರ ಸಂಘಸಂಸ್ಥೆಗಳ ಜೊತೆಗೂಡಿ ದಿನಾಂಕ 5–7 ನವೆಂಬರ್ 2008ರಂದು ಬಾಲ್ಯ ವಿವಾಹ ವಿರುದ್ಧ ರಾಜ್ಯ ಮಟ್ಟದ ಕಾರ್ಯಾಗಾರವನ್ನು ಬಿಜಾಪುರದ ಮಹಿಳಾ ವಿಶ್ವವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಾಗಾರದಲ್ಲಿ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು, ಸ್ವಯಂಸೇವಾ ಸಂಸ್ಥೆ ಸದಸ್ಯರು, ಶಿಕ್ಷಣ ಇಲಾಖೆ, ಪೋಲೀಸ್ ಇಲಾಖೆ ಪ್ರತಿನಿಧಿಗಳು ಮತ್ತಿತರರು ಭಾಗವಹಿಸಿದ್ದರು. ಈ ಕಾರ್ಯಾಗಾರಕ್ಕೆ ಮುಂಚಿತವಾಗಿ ಮಾಹಿತಿ ಹಕ್ಕಿನ ಮುಖಾಂತರ ಸರ್ಕಾರದವತಿಯಿಂದ ಬಾಲ್ಯವಿವಾಹವನ್ನು ತಡೆದಂತಹ ಮಾಹಿತಿಯನ್ನು ಪಡೆದುಕೊಳ್ಳಲಾಗಿತ್ತು ಮತ್ತು ಬಿಜಾಪುರದ ಆಯ್ದ ಹಳ್ಳಿಗಳಲ್ಲಿ ಕ್ಷೇತ್ರ ಸಮೀಕ್ಷೆ ನಡೆಸಲಾಗಿತ್ತು.

ಎರಡು ದಿನಗಳ ಈ ಕಾರ್ಯಾಗಾರದ ಅಂತ್ಯದಲ್ಲಿ ಬಾಲ್ಯವಿವಾಹವನ್ನು ನಿಲ್ಲಿಸಲು ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳನ್ನೂ ಸೂಚಿಸಿ ಸಂಬಂಧಪಟ್ಟ ಇಲಾಖೆಗಳಿಗೆ ಈ ಕುರಿತು ಕ್ರಮ ಕೈಗೊಳ್ಳಲು ಆಗ್ರಹಿಸಲಾಯಿತು.

ಈ ಕಾರ್ಯಾಗಾರ ನಡೆದ ನಂತರದ ಬೆಳವಣಿಗೆಗಳು ಗಮನಾರ್ಹ

- ಈ ಕಾರ್ಯಾಗಾರದಲ್ಲಿ ಹೊರಹೊಮ್ಮಿದ ಅಂಶಗಳನ್ನು ದಿನಾಂಕ 8–12–2008, ಪ್ರೆಸ್ ಕ್ಲಬ್‌ನಲ್ಲಿ ಮಾಧ್ಯಮ ಮಿತ್ರರೊಡನೆ ಹಂಚಿಕೊಳ್ಳಲಾಯಿತು. ಉದಯ ವಾಣಿ ದಿನಪತ್ರಿಕೆಯಲ್ಲಿ ಬಾಲ್ಯವಿವಾಹ ಕುರಿತಂತೆ ‘ಮಕ್ಕಳ ಕೊರಳಿಗೆ ಕಟ್ಟುವುದು ತಾಳಿಯಲ್ಲ, ಉರುಳು?’ ಎಂಬ ಲೇಖನ ಪ್ರಕಟವಾಯಿತು. ಪತ್ರಿಕೆಗಳು ಈ ಕುರಿತು ವ್ಯಾಪಕವಾಗಿ ಪ್ರಚಾರ ನೀಡಿದ್ದರ ಪರಿಣಾಮವಾಗಿ ಸರ್ಕಾರ ಬಾಲ್ಯವಿವಾಹ ನಿಷೇಧ ಕುರಿತಂತೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತು.
- ಕರ್ನಾಟಕ ಸರ್ಕಾರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗು ಮಕ್ಕಳ ರಕ್ಷಣಾ ಘಟಕಗಳು ಸಂಬಂಧಪಟ್ಟ ವಿವಿಧ ಇಲಾಖೆಗಳ ಪ್ರತಿನಿಧಿಗಳಿಗೆ ಬಾಲ್ಯವಿವಾಹ ನಿಷೇಧ ಕಾಯ್ದೆಯ ಕುರಿತಂತೆ ವಿಭಾಗೀಯ ಮಟ್ಟದ ಕಾರ್ಯಾಗಾರವನ್ನು ಏರ್ಪಡಿಸಿತ್ತು. ನಾಲ್ಕೂ ವಿಭಾಗೀಯ ಕಾರ್ಯಾಗಾರಗಳಲ್ಲಿ ನಿಗಾ ಕೇಂದ್ರದ ಸದಸ್ಯರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.
- ಬಿಜಾಪುರ ಮಹಿಳಾ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರು ಬಿಜಾಪುರ ಜಿಲ್ಲೆಯ ಬಬಲೇಶ್ವರ ಗ್ರಾಮವನ್ನು ದತ್ತು ತೆಗೆದುಕೊಂಡು, ಆ ಗ್ರಾಮದಲ್ಲಿ ಬಾಲ್ಯವಿವಾಹಗಳು ನಡೆಯದಂತೆ ಪೋಷಕರ ಮನವೊಲಿಸುತ್ತಿದ್ದಾರೆ. ಆ ಗ್ರಾಮವನ್ನು ಮಾದರಿ ಗ್ರಾಮವನ್ನಾಗಿ ಮಾಡಲು ಶ್ರಮಿಸುತ್ತಿದ್ದಾರೆ.
- ಧಾರವಾಡದ ಕಿಡ್ಸ್ ಸಂಸ್ಥೆಯು ಧಾರವಾಡದಲ್ಲಿ ಬಾಲ ಕಾರ್ಮಿಕ ಪದ್ಧತಿ ವಿರೋಧೀ ಆಂದೋಲನದ ಸಹಯೋಗದೊಡನೆ ಬಾಲ್ಯವಿವಾಹ ಕುರಿತಂತೆ ಸಾರ್ವಜನಿಕ ಅಹವಾಲು ಕಾರ್ಯಕ್ರಮವನ್ನು ಏರ್ಪಡಿಸಿತ್ತು. ನಿಗಾ ಕೇಂದ್ರದ ಪರವಾಗಿ ಡಾ. ಪದ್ಮಿನಿಯವರು ಈ ಕಾರ್ಯಕ್ರಮದಲ್ಲಿ ಮುಖ್ಯ ನಿರ್ಣಾಯಕರಾಗಿ ಭಾಗವಹಿಸಿದ್ದರು. ಸಾರ್ವಜನಿಕರಿಗೆ ಬಾಲ್ಯವಿವಾಹ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಲು ಮಕ್ಕಳು ಸೈಕಲ್ ರ್‍ಯಾಲಿಯನ್ನು ನಡೆಸಿದರು.
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ದಿನಾಂಕ 14, ನವೆಂಬರ್ 2009ರಂದು ಮಕ್ಕಳ ದಿನಾಚರಣೆಯ ಅಂಗವಾಗಿ ಬಾಲ್ಯವಿವಾಹವನ್ನು ತಡಗಟ್ಟಲು ಸಹಕರಿಸುವಂತೆ ಪತ್ರಿಕೆಗಳಲ್ಲಿ, ವಿದ್ಯುನ್ಮಾನ ಮಾಧ್ಯಮಗಳಲ್ಲಿ ವ್ಯಾಪಕವಾದ ಪ್ರಚಾರವನ್ನು ನೀಡಿತ್ತು.
- ಇತ್ತೀಚಿನ ವರ್ಷಗಳಲ್ಲಿ ಉತ್ತರ ಕರ್ನಾಟಕದ ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಗಳಲ್ಲಿ ಮಕ್ಕಳು ಬಾಲ್ಯವಿವಾಹ ಕುರಿತು ಪ್ರಸ್ತಾಪಿಸಿದ ಪರಿಣಾಮವಾಗಿ ಗ್ರಾಮ ಪಂಚಾಯಿತಿಗಳು ತಮ್ಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬಾಲ್ಯವಿವಾಹಗಳ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಪ್ರಯತ್ನ ಮಾಡುತ್ತಿದ್ದಾರೆ.
- ಮಾಹಿತಿ ಹಕ್ಕಿನ ಮುಖಾಂತರ ಪಡೆದ ‘ಸರ್ಕಾರದವತಿಯಿಂದ ಬಾಲ್ಯವಿವಾಹವನ್ನು ತಡೆದಂತಹ ಮಾಹಿತಿಯ’ ಆಧಾರದ ಮೇಲೆ ಹ್ಯೂಮನ್ ರೈಟ್ಸ್ ಲಾ ನೆಟ್ ವರ್ಕ್‌ನ ಶ್ರೀಮತಿ ಶೀಲಾ ರಾಮನಾಥನ್ ಮತ್ತು ಮಕ್ಕಳ ಹಕ್ಕುಗಳ ನಿಗಾಕೇಂದ್ರದ ಜಾಲದ ಸದಸ್ಯರಾದ ಬಾಗಲಕೋಟೆಯ ಬೂದಪ್ಪ ಉಚ್ಚನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯನ್ನು ಹೂಡಿದರು.
- ವಿಚಾರಣೆ ನಡೆಸಿದ ನ್ಯಾಯಾಲಯವು ದಿನಾಂಕ 3–11–2010ರಂದು ‘ಸಾಮೂಹಿಕ ವಿವಾಹಗಳಲ್ಲಿ ಬಾಲಕಿಯರ ಮದುವೆ ನಡೆಸುವುದಕ್ಕಿಂತ ಹೀನಾಯ ಅಪರಾಧ ಇನ್ನಾವುದೂ ಇಲ್ಲ. ಮುಗ್ಧ ಬಾಲಕಿಯರನ್ನು ಮದುವೆ ಮಾಡಿಸುವ ಪೋಷಕರನ್ನು ಮೊದಲು ಶಿಕ್ಷಿಸಬೇಕಾದ ಅಗತ್ಯ ಇದೆ. ಹಾಗಾದಾದ ಮಾತ್ರ ಇದಕ್ಕೆ ಕಡಿವಾಣ ಹಾಕಬಹುದು’ ಎಂದು ಅಭಿಪ್ರಾಯ ಪಟ್ಟು ಬಾಲ್ಯವಿವಾಹ ತಡೆಗೆ ವಿವಿಧ ಇಲಾಖೆಗಳ ತಜ್ಞರ ‘ಕೋರ್ ಕಮಿಟಿಯನ್ನು’ ರಚಿಸಬೇಕೆಂದು ಇಂಗಿತ ವ್ಯಕ್ತಪಡಿಸಿತು. (ಪ್ರಜಾವಾಣಿ, ಗುರುವಾರ, ನವೆಂಬರ್ 4, 2010; ಪುಟ 5)
- ದಿನಾಂಕ 11–12–2010ರಂದು ಕರ್ನಾಟಕದ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ನ್ಯಾ. ಜೆ.ಎಸ್. ಖೇಹರ್ ಮತ್ತು ನ್ಯಾ. ಎ.ಎಸ್. ಬೋಪಣ್ಣ ಅವರಿದ್ದ ವಿಭಾಗೀಯ ಪೀಠ, ಅರ್ಜಿಯ ವಿಚಾರಣೆ ನಡೆಸಿ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಅಧ್ಯಕ್ಷತೆಯಲ್ಲಿ ಕಂದಾಯ ಹಾಗು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿಗಳು, ಮಕ್ಕಳ ಹಕ್ಕುಗಳ ಆಯೋಗದ ಅಧ್ಯಕ್ಷರು ಸೇರಿ ನಾಲ್ವರು ಸದಸ್ಯರಿರುವ ಉನ್ನತ ಮಟ್ಟದ ಸಮಿತಿ ರಚಿಸಿ, ಬಾಲ್ಯವಿವಾಹ ತಡೆಗೆ ಈ ಸಮಿತಿಗೆ ಸರ್ಕಾರ ಸಂಪೂರ್ಣ ಸಹಕಾರ ನೀಡಬೇಕೆಂದು ಆದೇಶಿಸಿತು.

  ಬಾಲ್ಯವಿವಾಹ ತಡೆಯುವಲ್ಲಿ ವಿಫಲವಾಗಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಪೀಠ ತೀವ್ರವಾಗಿ ತರಾಟೆಗೆ ತೆಗೆದುಕೊಂಡು ಸಚಿವರು ಹಾಗು ರಾಜಕಾರಣಿಗಳು ಆಯೋಜಿಸುವ ಸಾಮೂಹಿಕ ವಿವಾಹ ಕಾರ್ಯಕ್ರಮಗಳಲ್ಲಿ ಬಾಲ್ಯ ವಿವಾಹ ನಡೆಯುತ್ತಿರುವುದು ವಿಪರ್ಯಾಸ ಎಂದು ಅಸಮಧಾನ ವ್ಯಕ್ತಪಡಿಸಿತು. ಬಾಲ್ಯವಿವಾಹ ತಡೆಗೆ ಸರ್ಕಾರ ಕೇವಲ ಜಾಹೀರಾತು, ಪತ್ರಿಕಾ ಪ್ರಕಟಣೆ ನೀಡಿದರೆ ಸಾಲದು, ಪರಿಣಾಮಕಾರಿಯಾಗಿ ಕಾನೂನು ಜಾರಿಗೆ ತರಬೇಕು. ಈಗ ರಚನೆಯಾಗಿರುವ ಉನ್ನತ ಮಟ್ಟದ ಸಮಿತಿಗೆ ಸರ್ಕಾರದ ಸಂಪೂರ್ಣ ಸಹಕಾರ ನೀಡಬೇಕು, ನಿರ್ಲಕ್ಷ್ಯ ಧೋರಣೆ ತಾಳಿದರೆ ಕಾನೂನು ಕ್ರಮಕ್ಕೆ ಮುಂದಾಗಬೇಕಾಗುತ್ತದೆ ಎಂದು ಪೀಠ ಎಚ್ಚರಿಕೆ ನೀಡಿತು. (ಉದಯವಾಣಿ, ಶುಕ್ರವಾರ, ನವೆಂಬರ್ 12, 2010; ಪುಟ 4)

ಇದು ಅನೇಕ ವರ್ಷಗಳಿಂದ ಬಾಲ್ಯವಿವಾಹದ ವಿರುದ್ಧ ಶ್ರಮಿಸಿದ ಹಲವಾರು ಸಂಘಸಂಸ್ಥೆಗಳು, ವ್ಯಕ್ತಿಗಳ ಶ್ರಮಕ್ಕೆ ಸಿಕ್ಕ ಪ್ರತಿಫಲ. ಸರ್ಕಾರ ಇನ್ನು ಮುಂದಾದರೂ ನ್ಯಾಯಾಲಯದ ಆದೇಶವನ್ನು ಪಾಲಿಸಿ ಬಾಲ್ಯವಿವಾಹವನ್ನು ನಿಷೇಧಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತದೆಂದು ಆಶಿಸೋಣ.

# ‘ಮಕ್ಕಳ ಕಡ್ಡಾಯ ಮತ್ತು ಉಚಿತ ಶಿಕ್ಷಣ ಹಕ್ಕು’ ತರಬೇತಿ ಶಿಬಿರ

ಎಲ್ಲರಿಗೂ ಅಗತ್ಯವಿರುವ ಹಾಗೂ ಎಲ್ಲರೂ ನಿರೀಕ್ಷಿಸುತ್ತಿದ್ದ ‘ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯಿದೆ’ 2009ರಲ್ಲಿ ಅನುಮೋದಿಸಲ್ಪಟ್ಟು 2010ರ ಏಪ್ರಿಲ್ ಒಂದರಿಂದ ಜಾರಿಗೆ ಬಂದಿದೆ. ಈ ಕಾಯ್ದೆಯ ಸಾಧಕ ಬಾಧಕಗಳನ್ನು ಕುರಿತು ರಾಜ್ಯದ ನಾನಾ ಭಾಗಗಳಲ್ಲಿ ಚರ್ಚೆಗಳು, ಸಭೆಗಳು, ಸಮಾವೇಶಗಳು ಚಿಂತಕರೊಡನೆ, ಸ್ವಯಂ ಸೇವಾ ಸಂಘ ಸಂಸ್ಥೆಗಳು, ಶಿಕ್ಷಣವಾದಿಗಳು, ತಜ್ಞರು ಮತ್ತು ಶಿಕ್ಷಣ ಇಲಾಖೆಯವರೊಡನೆ ನಡೆಯುತ್ತಲೇ ಇವೆ. ಹಲವಾರು ಈ ಕಾಯ್ದೆಯನ್ನು ಸ್ವಾಗತಿಸಿದರೆ, ಕೆಲವರು ಈ ಕಾಯ್ದೆಯು ಅಪ್ರಯೋಜಕವಾಗಿದೆ ಎಂದು ಅಲ್ಲಗಳೆಯುತ್ತಿದ್ದಾರೆ. ಈ ಕಾಯ್ದೆಯಲ್ಲಿರುವ 25% ಮೀಸಲಾತಿ, ಖಾಸಗಿ ಶಾಲೆಗಳ ಮತ್ತು ಸರ್ಕಾರಿ ಶಾಲೆಗಳ ಪಾತ್ರ, ಆಯವ್ಯಯ ಮತ್ತು ಕರ್ನಾಟಕ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಉಸ್ತುವಾರಿ ಹೀಗೆ ಹಲವಾರು ವಿಷಯಗಳಲ್ಲಿ ಗೊಂದಲಗಳಿವೆ.

ಈ ನಿಟ್ಟಿನಲ್ಲಿ ಸ್ವಯಂ ಸೇವಾ ಸಂಘ ಸಂಸ್ಥೆಗಳು ಮತ್ತು ಮಕ್ಕಳ ಪರ ಚಿಂತಕರ ಒಕ್ಕೂಟವಾದ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ನಿಗಾ ಕೇಂದ್ರವು ಯುನಿಸೆಫ್ ಸಹಯೋಗದೊಂದಿಗೆ ದಿನಾಂಕ 1–2 ಸೆಪ್ಟೆಂಬರ್ 2010ರಂದು, ಬೆಂಗಳೂರಿನ ಆಶೀರ್ವಾದ್ ಸಂಸ್ಥೆಯಲ್ಲಿ ಮಕ್ಕಳ ಕಡ್ಡಾಯ ಮತ್ತು ಉಚಿತ ಶಿಕ್ಷಣದ ಕಾಯಿದೆ ಕುರಿತು ರಾಜ್ಯ ಮಟ್ಟದ ತರಬೇತುದಾರರ ತರಬೇತಿಯನ್ನು ಏರ್ಪಡಿಸಿತ್ತು.

ಈ ಕಾರ್ಯಗಾರದಲ್ಲಿ ರಾಜ್ಯದ ವಿವಿಧ ಭಾಗಗಳಿಂದ ಸ್ವಯಂಸೇವಾ ಸಂಸ್ಥೆಯ ಪ್ರತಿನಿಧಿಗಳು ಆಗಮಿಸಿದ್ದರು. ಈ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಮಹೇಂದ್ರ (ಸಲ್ಯೂಷನ್ ಎಕ್ಸ್‌ಚೇಂಜ್ ಕರ್ನಾಟಕ); ಶ್ರೀ ವಿಕ್ಟರ್ (ಐ.ಎಲ್.ಪಿ.); ಶ್ರೀ ರಾಮನಾಥನ್ (ಸಮಾ ಫೌಂಡೇಶನ್); ಶ್ರೀಮತಿ ಕಾತ್ಯಾಯಿನಿ ಚಾಮರಾಜ್ (ಸಿವಿಕ್); ಕು. ಮಮತ (ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ) ಭಾಗವಹಿಸಿದ್ದರು. ಮಕ್ಕಳ ಹಕ್ಕುಗಳ ನಿಗಾಕೇಂದ್ರದ ಪರವಾಗಿ ಡಾ.ಪದ್ಮಿನಿ, ವಾಸುದೇವ ಶರ್ಮಾ, ಸತೀಶ್ ಜಿ.ಸಿ. ಮಾಹಿತಿ ಹಂಚಿಕೊಂಡರು.

**ಸಂಪನ್ಮೂಲ ವ್ಯಕ್ತಿಗಳಿಂದ ಬಂದ ಸಲಹೆಗಳು:**

– ಶಿಕ್ಷಣ ಪದ್ಧತಿಯು ಎಲ್ಲ ಮಕ್ಕಳಿಗೂ ಸಮಾನವಾದ ಕಲಿಕೆಯನ್ನೊಳಗೊಂಡಿರಬೇಕು.

– ಕಾಯಿದೆಯಡಿಯಲ್ಲಿ ಅಂಗವಿಕಲ ಮಕ್ಕಳಿಗೆ ಸೂಕ್ತವಾದ ವ್ಯವಸ್ಥೆಯನ್ನು ಮಾಡಿ ಶಿಕ್ಷಣದ ಹಕ್ಕು ಖಾತರಿಯಾಗುವಂತೆ ರಾಜ್ಯ ಸರ್ಕಾರವು ಮಾಡಬೇಕು.

– ರಾಜ್ಯದ ಬೇರೆ–ಬೇರೆ ಜಿಲ್ಲೆಗಳಲ್ಲಿ ಮಕ್ಕಳ ಜೊತೆ ಸಮಾಲೋಚನೆ ಸಮಾವೇಶಗಳನ್ನು ನಡೆಸಿ ಕಾಯ್ದೆಯ ನಿಯಮಗಳನ್ನು ಗಟ್ಟಿ ಮಾಡುವ ಪ್ರಯತ್ನವನ್ನು ಮಾಡಬೇಕು.

– ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ವರ್ಗಾವಣೆ ಆಗಿ ಬಂದಂತಹ ಶಿಕ್ಷಕರಿಗೆ ಸ್ಥಳೀಯ ಸಂಪ್ರಾದಯ, ಮಕ್ಕಳ ಪರಿಸ್ಥಿತಿಯ ಬಗ್ಗೆ ಮಾಹಿತಿಯನ್ನು ನೀಡಬೇಕು.

– ವಲಸೆ ಬಂದಂತಹ ಮಕ್ಕಳು ಹಾಗೂ ಕುಟುಂಬಗಳಿಗೆ ವಲಸೆ ಕಾರ್ಡ್ ಸಿಗುವಂತೆ ಮಾಡಬೇಕು ಹಾಗೂ ಅದರ ಬಗ್ಗೆ ಶಿಕ್ಷಕರಿಗೆ ಮತ್ತು ಸಮುದಾಯಕ್ಕೆ ಮಾಹಿತಿಯನ್ನು ನೀಡಬೇಕು.

– ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಕಾಯಿದೆ ಎಂಬುವಲ್ಲಿ ‘ಉಚಿತ’ ಹಾಗೂ ‘ಕಡ್ಡಾಯ’ದ ಕುರಿತು ಕಾಯಿದೆ ಹಾಗೂ ನಿಯಮಗಳಲ್ಲಿ ಸ್ಪಷ್ಟ ವಿವರಣೆಯನ್ನು ನೀಡಬೇಕು.

– ಅನಾಥ ಮಕ್ಕಳಿಗೆ ವಸತಿಶಾಲೆಗಳನ್ನು ಕಲ್ಪಿಸುವ ವ್ಯವಸ್ಥೆಯನ್ನು ಮಾಡಬೇಕು.

– ಹೆಚ್‌ಐವಿ/ಏಯ್ಡ್ಸ್ ಇರುವ ಮಕ್ಕಳ ಶಿಕ್ಷಣದ ಹಕ್ಕಿನ ಬಗ್ಗೆ ಕಾಯಿದೆಯ ಅಡಿಯಲ್ಲಿ ಸ್ಪಷ್ಟತೆ ಬೇಕು.

**ಗುಂಪು ಚರ್ಚೆಯಿಂದ ಬಂದ ಸಲಹೆಗಳು:**

* ಸಮುಚಿತ ಸರ್ಕಾರಗಳು, ಸ್ಥಳೀಯ ಸರ್ಕಾರದ ಬಾಧ್ಯತೆಗಳನ್ನು ಕುರಿತು ಕಾಯಿದೆಯ ನಿಯಮಗಳಲ್ಲಿ ವಿವರಣೆ ನೀಡಬೇಕು.

* ಶಾಲಾ ಅಭಿವೃದ್ಧಿ ಸಮಿತಿಗಳ ಉಸ್ತುವಾರಿಯ ಬಗ್ಗೆ ಹಾಗೂ ಖಾಸಗಿ ಶಾಲೆಗಳಲ್ಲಿ ಈ ಸಮಿತಿಯನ್ನು ಅಳವಡಿಸಿಕೊಳ್ಳುವುದರ ಬಗ್ಗೆ ಸ್ಪಷ್ಟತೆ ಇರಬೇಕು.

* ಶಿಕ್ಷಕರಿಂದ ಮಕ್ಕಳಿಗಾಗುವ ಮಾನಸಿಕ ಹಾಗೂ ದೈಹಿಕ ಒತ್ತಡಕ್ಕೆ ಪ್ರತಿಯಾಗಿ ಶಿಕ್ಷಕರಿಗೆ ನೇರವಾದ ಶಿಕ್ಷೆಯ ಕ್ಲಾಜನ್ನು ಕಾಯಿದೆಯಲ್ಲಿ ನಮೂದಿಸಬೇಕು.

* ನವೋದಯ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳನ್ನೂ ಪರಿಗಣನೆಗೆ ತೆಗೆದುಕೊಳ್ಳಬೇಕು. ಹಾಗೂ ಇದರ ಕುರಿತಾಗಿ ಶಿಕ್ಷಣ ಕಾಯಿದೆಯ ನಿಯಮಗಳಲ್ಲಿ ಅಳವಡಿಸಿಕೊಳ್ಳಬೇಕು.

* ಶಾಲೆಯಲ್ಲಿ ಮಕ್ಕಳಿಗೆ ಅಧ್ಯಾಪಕರಿಂದಾಗುವ ಶಿಕ್ಷೆಗಳ ವಿರುದ್ಧ ಸರ್ವೋಚ್ಚ ನ್ಯಾಯಾಲಯ ವಿಶೇಷ ಮಾರ್ಗದರ್ಶಿ ಸೂತ್ರಗಳನ್ನು ನೀಡಿದೆ. ಅಂತಹ ಮಾರ್ಗದರ್ಶಿ ಸೂತ್ರಗಳನ್ನು ಶಿಕ್ಷಣ ಇಲಾಖೆಯು ಕಾಯಿದೆಯ ನಿಯಾಮವಳಿಗಳಲ್ಲಿ ಅಳವಡಿಸಿಕೊಳ್ಳಬೇಕು.

* ಕಾಯಿದೆಯ ನಿಯಮಗಳ ವಿಭಾಗ 22(2)ರಲ್ಲಿ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಲ್ಲಿ ಅಧ್ಯಕ್ಷರನ್ನು ಒಳಗೊಂಡು ಮೂರು ಜನ ಸದಸ್ಯರಿರುವುದಾಗಿ ಸೂಚಿಸಿದ್ದು, ಕಾಯಿದೆಯ ಅಂತಿಮ ಪ್ರತಿಯಲ್ಲಿ ಅಧ್ಯಕ್ಷರನ್ನು ಒಳಗೊಂಡು ಆರು ಜನ ಸದಸ್ಯರು ಎಂದು ತಿದ್ದುಪಡಿ ಮಾಡಬೇಕು.

* 3 ವರ್ಷ ದಾಟಿದ ಎಲ್ಲಾ ಮಕ್ಕಳಿಗೆ ಉಚಿತವಾಗಿ ಶಾಲಾ ಪೂರ್ವ ಶಿಕ್ಷಣದ ವ್ಯವಸ್ಥೆಗಳ ಬಗ್ಗೆ ಕಾಯಿದೆ ಮತ್ತು ಕರಡು ನಿಯಾಮಗಳಲ್ಲಿ ಸೂಚಿಸಿರುವಲ್ಲಿ ದ್ವಂದ್ವಾರ್ಥವಿದೆ. ಕಾಯಿದೆಯಲ್ಲಿ ಶಾಲಾ ಪೂರ್ವ ಶಿಕ್ಷಣದ ವ್ಯವಸ್ಥೆಯನ್ನು ಮಾಡಬಹುದು ಎಂದಿದ್ದು ನಿಯಮಗಳಲ್ಲಿ ಮಾಡಲೇಬೇಕು ಎಂದು ಸೂಚಿಸಲಾಗಿದೆ. [ಕಾಯಿದೆ–ಅಧ್ಯಾಯ 3 ಸೂಕ್ತ ಸರ್ಕಾರಗಳು, ಸ್ಥಳೀಯ ಸರ್ಕಾರ ಮತ್ತು ಪೋಷಕರ

ಕರ್ತವ್ಯಗಳು–ವಿಭಾಗ 11. ನಿಯಮಗಳು–ಅಧ್ಯಾಯ3(ಎ) ಸರ್ಕಾರ ಮತ್ತು ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು–ವಿಭಾಗ4(13)]

* ಕಾಯಿದೆಯ ಕರಡು ನಿಯಮದಲ್ಲಿ–ಅಧ್ಯಾಯ 4, ಶಾಲೆಗಳು ಮತ್ತು ಶಿಕ್ಷಕರ ಜವಾಬ್ದಾರಿಗಳು ವಿಭಾಗ 7(1) ಸೂಚಿಸಿರುವಂತೆ 'ನೆರೆಹೊರೆಯ ಶಾಲೆಗಳಲ್ಲಿ ಮಾನ್ಯತೆ ಪಡೆದ ಖಾಸಗಿ ಅನುದಾನರಹಿತ ಶಾಲೆಗಳಲ್ಲಿ ಮಕ್ಕಳು ದಾಖಲಾತಿಯನ್ನು ಪಡೆಯುವಾಗ ಪ್ರತಿಯೊಂದು ಮಗುವಿನ ತಲಾ ವೆಚ್ಚವನ್ನು ರಾಜ್ಯ ಸರ್ಕಾರವು ತನಿಖೆ ನಡೆಸಿ ನಿಗದಿಯಾದ ಹಣವನ್ನು ಪ್ರತಿ ವರ್ಷ ಡಿಸೆಂಬರ್‌ನ ಒಳಗೆ ಮರುಪಾವತಿಸಬೇಕು. ಖಾಸಗಿ ಶಾಲೆಯವರು ಬೇರೆ ಯಾವುದೇ ಹೆಚ್ಚುವರಿ ಶುಲ್ಕ/ವೆಚ್ಚವನ್ನು ಮಗುವಿನ ಮೇಲೆ ಹೇರುವಂತಿಲ್ಲ' ಇದರ ಬಗ್ಗೆ ಯಾವುದೇ ಮಾಹಿತಿಯನ್ನು ಕಾಯಿದೆಯಲ್ಲಿ ಸ್ಪಷ್ಟಪಡಿಸಿಲ್ಲ.
* ಗ್ರಾಮಾಂತರ ಪ್ರದೇಶದ ಮಕ್ಕಳಿಗೆ ಅಗತ್ಯವಿರುವ ಸೌಲಭ್ಯಗಳ (ಸಾರಿಗೆ ಸೌಲಭ್ಯ, ಶೌಚಾಲಯ ಇನ್ನಿತರೆ) ಕುರಿತಾಗಿ ಹಾಗೂ ಎಲ್ಲಾ ಮಕ್ಕಳಿಗೂ ಅವಶ್ಯಕವಾಗಿರುವ ಕ್ರೀಡೆ ಹಾಗೂ ದೈಹಿಕ ಶಿಕ್ಷಣದ ಬಗ್ಗೆ ಕಾಯಿದೆ ಹಾಗೂ ನಿಯಮಗಳಲ್ಲಿ ಸ್ಪಷ್ಟಪಡಿಸಬೇಕು.
* ಶಾಲಾಭಿವೃದ್ಧಿ ಸಮಿತಿಯ ಹೆಸರಿನಲ್ಲಿ ಶಾಲೆಗಳು ಮಕ್ಕಳಿಂದ ಶುಲ್ಕವನ್ನು ಪಡೆದರೆ, ಶಾಲೆಗಳ ಮೇಲೆ ಕ್ರಮ ಜರುಗಿಸುವಂತೆ ಕಾಯಿದೆ ಹಾಗೂ ನಿಯಮಗಳಲ್ಲಿ ಸ್ಪಷ್ಟನೆ ಬೇಕು.

### ಕ್ರಿಯಾ ಯೋಜನೆ ಮತ್ತು ಅನುಸರಣೆ

ತರಬೇತಿಯಲ್ಲಿ ಭಾಗಿಗಳಾಗಿದ್ದ ರಾಜ್ಯದ 18 ಜಿಲ್ಲೆಗಳ ಪ್ರತಿನಿಧಿಗಳು ಎರಡು ದಿನಗಳ ತರಬೇತಿಯ ಅಂತ್ಯದಲ್ಲಿ ಕ್ರಿಯಾ ಯೋಜನೆಯನ್ನು ನಿರ್ಮಿಸಿದರು. ಈ ತರಬೇತಿಯ ಮುಖ್ಯ ಉದ್ದೇಶ, ಬಂದಂತಹ ಜಿಲ್ಲಾ ಪ್ರತಿನಿಧಿಗಳು ಮಂದಿನ ದಿನಗಳಲ್ಲಿ ತಮ್ಮ ತಮ್ಮ ಜಿಲ್ಲೆಗಳಲ್ಲಿ ಈ ಕಾಯ್ದೆ ಕುರಿತು ವಿವಿಧ ಹಂತಗಳಲ್ಲಿ ಚರ್ಚಿಸಲು ಅವರನ್ನು ತಯಾರು ಮಾಡುವುದಾಗಿತ್ತು.

ತರಬೇತಿ ಪಡೆದವರು ತಮ್ಮ ತಮ್ಮ ಜಿಲ್ಲೆಗಳಲ್ಲಿ ವಿಸ್ತೃತವಾದ ಚರ್ಚೆಗಳನ್ನು ಏರ್ಪಡಿಸುವುದು ಮತ್ತು ಇನ್ನೂ ಅನೇಕ ವ್ಯಕ್ತಿಗಳನ್ನು ಈ ಕಾಯಿದೆ ಕುರಿತು ಚರ್ಚೆಗಳನ್ನು ಏರ್ಪಡಿಸಿ ತಯಾರು ಮಾಡುವ ಆಸಕ್ತಿ ತೋರಿದ್ದಾರೆ. ಶಿಕ್ಷಕರು, ಗ್ರಾಮಪಂಚಾಯಿತಿಗಳ ಸದಸ್ಯರು ಇತರರೊಡನೆ ಮಾಹಿತಿ ಹಂಚಿಕೆ ಮುನ್ನಡೆಸಲು ಇರುವ ಸಾಧ್ಯತೆಗಳ ಕುರಿತು ಕ್ರಿಯಾಯೋಜನೆಯನ್ನು ಸಿದ್ಧಪಡಿಸಲಾಯಿತು.

ಇತರೆ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ತರಬೇತಿ, ಪತ್ರಕರ್ತರಿಗೆ ಮಾಹಿತಿಯೇ ಮಾದಲಾದವು ಈ ಕ್ರಿಯಾ ಯೋಜನೆಯಲ್ಲಿ ಒಳಗೊಂಡಿದೆ. ಇಷ್ಟೇ ಅಲ್ಲದೆ ಈ ಕಾಯಿದೆಯ ಜಾರಿಗೆ ಕರ್ನಾಟಕ ರಾಜ್ಯ ಸರ್ಕಾರವು ನಿರ್ಮಿಸಿರುವ ಕರಡು ನಿಯಮಗಳನ್ನೂ ವಿಮರ್ಷೆ ಒಳಪಡಿಸಿ ಸರ್ಕಾರಕ್ಕೆ ತಮ್ಮ ಅಭಿಪ್ರಾಯವನ್ನು ತಿಳಿಸಲು ನಿರ್ಧರಿಸಲಾಯಿತು. ಕ್ರಿಯಾ ಯೋಜನೆಯನ್ನು ಜಾರಿಗೊಳಿಸುವ ಹಂತಗಳಲ್ಲಿ ಮತ್ತೊಮ್ಮೆ ಸರ್ವಶಿಕ್ಷಣ ಅಭಿಯಾನಕ್ಕೆ ಪತ್ರ ಬರೆಯುವುದಾಗಿ ಎಲ್ಲರೂ ಸೇರಿ ನಿರ್ಧರಿಸಿದರು.

## ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಚಟುವಟಿಕೆಗಳ ಕುರಿತು ಸಮಾಜ ಕಾರ್ಯ ವಿದ್ಯಾರ್ಥಿಗಳ ಅನಿಸಿಕೆಗಳು:

* ಸುದ್ದಿಯಲ್ಲಿ ಮಕ್ಕಳು ಚಟುವಟಿಕೆಯಲ್ಲಿ ಮಕ್ಕಳನ್ನು ಕುರಿತು ಪ್ರಕಟವಾಗುವ ಸುದ್ದಿಗಳನ್ನು ನಮಗೆ ಕಳುಹಿಸುತ್ತಿರುವುದು ನಮ್ಮ ಕಾಲೇಜಿನ ವಿದ್ಯಾರ್ಥಿಗಳು ಮಕ್ಕಳ ಬಗ್ಗೆ ಕಿರು ಸಂಶೋಧನೆಯಲ್ಲಿ ತೊಡಗಲು ಕಾರಣವಾಯಿತು.

**ವಿನೋದ್ ರಾಜ್ ಡಿ ಮತ್ತು ವೆಂಕಟೇಶ್ ಮೂರ್ತಿ ಡಿ.**
**3ನೇ ಸೆಮಿಸ್ಟರ್, ಬೆಂಗಳೂರು ಜ್ಞಾನ ಭಾರತಿ.**

* ನಿಗಾ ಕೇಂದ್ರವು ಆಯೋಜಿಸಿರುವ ಕಾರ್ಯಕ್ರಮಗಳೆಲ್ಲ ಹೆಚ್ಚು ಮಹತ್ವದ್ದಾಗಿದ್ದವು. ನಮ್ಮ ಕಾಲೇಜಿನಿಂದ ಯಮರೆ ಗ್ರಾಮ ಪಂಚಾಯತಿಯಲ್ಲಿ ಒಂದು ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯನ್ನು ಹಮ್ಮಿಕೊಂಡಿದ್ದೆವು. ಇದರಿಂದ ನಮಗೆ ಸಮುದಾಯ ಸಂಘಟನೆ ಮಾಡಲು ಅನುಕೂಲವಾಗುತ್ತಿದೆ. ಪ್ರಬಂಧ ಸ್ಪರ್ಧೆಯಿಂದ ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿತು.

**ಲೋಕೇಶ್ ಹೆಚ್.ಎಸ್. ಮತ್ತು ಆಂಜನೇಯ ಬಿ., ಆಕ್ಸ್‌ಫರ್ಡ್ ಕಾಲೇಜ್.**

* ನಿಗಾ ಕೇಂದ್ರದ ಅಡಿಯಲ್ಲಿ ಬರುವಂತಹ ಸುದ್ದಿಯಲ್ಲಿ ಮಕ್ಕಳು ಈ ಕಾರ್ಯಕ್ರಮದಿಂದ ನಮಗೆ ಅಂದರೆ ಸಮಾಜಕಾರ್ಯ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾಗಿದೆ. ಇದರಲ್ಲಿ ದಿನಪತ್ರಿಕೆಯಲ್ಲಿ ಬರುವಂತಹ ಮಕ್ಕಳ ಸುದ್ದಿಯನ್ನು ಸಂಗ್ರಹಿಸಿಕೊಂಡು ಮಕ್ಕಳ ಹಕ್ಕುಗಳು, ಅವರಿಗೆ ಆಗುವಂತಹ ಅನಾನುಕೂಲಗಳು, ಅನುಕೂಲಗಳನ್ನು ನಾವು ತಿಳಿದುಕೊಳ್ಳಲು ಸಹಾಯಕವಾಗಿದೆ. ಅಲ್ಲದೇ ಮಕ್ಕಳಿಗೆ ಆಗುವಂತಹ ತೊಂದರೆಗಳನ್ನು ತಿಳಿದುಕೊಂಡು ಅವರಿಗೆ ತೊಂದರೆಗಳಾಗದಂತೆ ನಾವು ನೋಡಿಕೊಳ್ಳಲು ಇದು ಬಹಳ ಉಪಯುಕ್ತವಾಗಿದೆ.

**ನಾರಾಯಣ್ ಹೆಚ್.ಜಿ., ಸೇಂಟ್ ಜಾರ್ಜ್ ಕಾಲೇಜ್.**

* ಮಕ್ಕಳ ಹಕ್ಕುಗಳ ಬಗ್ಗೆ ಅರಿವು, ಕಾರ್ಯಾಗಾರ, ಸುದ್ದಿಯಲ್ಲಿ ಮಕ್ಕಳು ಇಂತಹ ವಿಷಯಗಳ ಬಗ್ಗೆ ತುಂಬಾ ಒಳ್ಳೆಯ ಕಾರ್ಯನಿರ್ವಹಣೆ ಮಾಡುತ್ತಿದೆ. ಗ್ರಾಮ ಪಂಚಾಯಿತಿಗಳಲ್ಲಿ ಮಕ್ಕಳನ್ನು ಅರಿವು ಮೂಡಿಸುತ್ತಿದ್ದು, ಇದು ಪ್ರತಿಯೊಂದು ಹಳ್ಳಿಗೂ ತಲುಪಿಸುವುದು ನಮ್ಮ ಆಶಯ. ನಮ್ಮ ಕಾಲೇಜಿನಲ್ಲಿ ಮಕ್ಕಳ ಹಕ್ಕುಗಳ ಕಾರ್ಯಾಗಾರ ಮಾಡಿಸಲು ನಮ್ಮ ವಿದ್ಯಾರ್ಥಿಗಳು ಕಾತುರದಿಂದ ಕಾಯುತ್ತಿದ್ದಾರೆ.

**ಕೇಶವಮೂರ್ತಿ ಡಿ. ಮತ್ತು ಪ್ರಕಾಶ್ ಆರ್. ಪಿ.ಜಿ. ಸೆಂಟರ್, ಕೋಲಾರ.**

* ನಿಗಾ ಕೇಂದ್ರದ 'ಸುದ್ದಿಯಲ್ಲಿ ಮಕ್ಕಳು' ಚಟುವಟಿಕೆಯು ಜನರಿಗೆ ಹಲವಾರು ಪತ್ರಿಕೆಗಳಲ್ಲಿ ಬರುವ ಮಕ್ಕಳ ಸುದ್ದಿಗಳನ್ನು ಒಂದೇ ಬ್ಲಾಗ್‌ನಲ್ಲಿ ಸುಲಭವಾಗಿ ನೋಡಲು ಸಹಾಯ ಮಾಡುತ್ತದೆ. ಜನರು ಈ ಬ್ಲಾಗ್‌ನ ಮೂಲಕ ಮಕ್ಕಳಿಗೆ ಸಹಾಯಕವಾಗುವ ಕಾನೂನುಗಳಲ್ಲಿ ಸಕಾರಾತ್ಮಕ ಬದಲಾವಣೆಯನ್ನು ತರಬಲ್ಲ ತಮ್ಮ ದೃಷ್ಟಿಕೋನಗಳನ್ನು ಮಕ್ಕಳ ಪರಿಸ್ಥಿತಿಯನ್ನು ಸುಧಾರಿಸಲು ನೀಡಬಹುದು.

**ಜೊನಾಥನ್ ರಾಜೀವ್, ಕ್ರೈಸ್ಟ್ ಕಾಲೇಜ್.**

* ರಾಜ್ಯ ಹಾಗೂ ರಾಷ್ಟ್ರದಲ್ಲಿ ಪ್ರತಿ ಮಗುವನ್ನು ಉತ್ತಮ ಮಗುವಾಗಿ ಮಾಡಲು ಇರುವ ಮುಖ್ಯ ಸವಾಲುಗಳನ್ನು ಗಮನಿಸಲು ನಿಗಾಕೇಂದ್ರದ 'ಸುದ್ದಿಯಲ್ಲಿ ಮಕ್ಕಳು' ಚಟುವಟಿಕೆ ಸಹಾಯ ಮಾಡಿತು. ಭಾರತದಲ್ಲಿ ಬಾಲ್ಯ ವಿವಾಹವು ರದ್ದಾಗಿದೆ ಎಂಬಂತಹ ಕಲ್ಪನೆ ಇದೆ. ಆದರೆ ನಿಗಾಕೇಂದ್ರವು ಕರ್ನಾಟಕದಲ್ಲಿ ಬಾಲ್ಯ ವಿವಾಹವು ಹೆಚ್ಚು ಪ್ರಮಾಣದಲ್ಲಿರುವುದನ್ನು ತೋರಿಸಿದೆ.

**ವರ್ಷಾ. ಪಿ. ಕ್ರೈಸ್ಟ್ ಕಾಲೇಜ್.**

# ನವೆಂಬರ್ 20, ಅಂತಾರಾಷ್ಟ್ರೀಯ ಮಕ್ಕಳ ಹಕ್ಕುಗಳ ದಿನ

ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಗೀಗ 21 ವರ್ಷ. 1989ರಲ್ಲಿ ವಿಶ್ವಸಂಸ್ಥೆಯು ಮುಂದಿಟ್ಟ, ಮಕ್ಕಳನ್ನು ಕುರಿತು ಜಗತ್ತಿನ ಎಲ್ಲ ದೇಶಗಳು ಪರಿಪಾಲಿಸಲೇಬೇಕಾದ ಕಟ್ಟುಪಾಡುಗಳನ್ನು ಈಗ ವಿಶ್ವಸಂಸ್ಥೆಯ ಎಲ್ಲ ರಾಷ್ಟ್ರಗಳು ಸಹಿ ಮಾಡಿ ಒಪ್ಪಿಕೊಂಡಿವೆ. ಅಮೇರಿಕಾ ಮತ್ತು ಸೊಮಾಲಿಯಾ ದೇಶಗಳು ಮಾತ್ರ ಒಡಂಬಡಿಕೆಗೆ ಸಹಿ ಮಾಡಿದ್ದರೂ, ಅವುಗಳನ್ನು ದೇಶದ ಕಾನೂನುಗಳು ಮತ್ತು ಕಾರ್ಯಕ್ರಮಗಳಲ್ಲಿ ಅಳವಡಿಸಲು ಮುಂದಾಗಿಲ್ಲ. ಭಾರತ 1992ರಲ್ಲಿ ಈ ಒಡಂಬಡಿಕೆಗೆ ಸಹಿ ಮಾಡಿ ದೇಶದ ಎಲ್ಲ ಮಕ್ಕಳಿಗೆ ಅತ್ಯುತ್ತಮವಾದ ಸೇವೆ, ಸೌಲಭ್ಯ ಮತ್ತು ರಕ್ಷಣೆಯನ್ನು ಒದಗಿಸುವುದಲ್ಲದೆ ಮಕ್ಕಳಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲೂ ಅವಕಾಶಗಳನ್ನು ಸೃಷ್ಟಿಸುವ ಭರವಸೆಯನ್ನು ನೀಡಿದೆ.

ಮಕ್ಕಳಿಗಾಗಿ ಯೋಜನೆಗಳು ನೂರಾರು. ಕಾಯಿದೆ ಕಾನೂನುಗಳು ಹಲವಾರು. ಮಕ್ಕಳಿಗಾಗಿ ಸರ್ಕಾರ, ಸ್ವಯಂಸೇವಾ ಸಂಸ್ಥೆಗಳು ಮೀಸಲಿಡುವ ಹಣವೂ ಅಪಾರ. ಇಷ್ಟಲ್ಲದೆ ಮಕ್ಕಳ ಹೆಸರಿನಲ್ಲಿ ವಿದೇಶಗಳಿಂದ ಪಡೆಯುವ ದೇಣಿಗೆ, ಅನುದಾನ, ಸಾಲವೇ ಮೊದಲಾದವುಗಳು ಸಾಕಷ್ಟು ಇದೆ. ಆದರೂ, ಮಕ್ಕಳ ಪರಿಸ್ಥಿತಿಯನ್ನು ಗಮನಿಸಿದರೆ ಇನ್ನೂ ಆಗಬೇಕಿರುವುದು ಬೆಟ್ಟದಷ್ಟು ಎಂದು ಹಲವಾರು ಅಧ್ಯಯನಗಳು, ಕ್ಷೇತ್ರ ಭೇಟಿ, ಅಂಕಿಸಂಖ್ಯೆಗಳ ವಿಶ್ಲೇಷಣೆ ತೋರಿಸುತ್ತಿವೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಸದಸ್ಯ ಸಂಸ್ಥೆಗಳು ನವೆಂಬರ್ 20, 2010ರಂದು ಒಟ್ಟಿಗೆ ಸೇರಿ ಕೆಲವು ನಿರ್ದಿಷ್ಟ ವಿಚಾರಗಳನ್ನು ವಿಶ್ಲೇಷಿಸಿ, ರಾಜ್ಯದಲ್ಲಿ ಮಕ್ಕಳ ಸ್ಥಿತಿಗತಿ ಹೇಗಿದೆ ಎಂಬುದರತ್ತ ಕ್ಷಕಿರಣ ಬೀರಲೆತ್ನಿಸಿದರು.

**ಶಿಕ್ಷಣ ಮತ್ತು ಮಕ್ಕಳು** : ಇಡೀ ದೇಶದಲ್ಲಿ ಈಗ ಅತಿ ಹೆಚ್ಚು ಚರ್ಚೆಯಲ್ಲಿರುವ ವಿಚಾರ ಮಕ್ಕಳ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದ ಹಕ್ಕು. ಭಾರತ ಸರ್ಕಾರ ಹೊರಡಿಸಿರುವ ಹೊಸ ಕಾಯಿದೆಯಂತೆ ಆರರಿಂದ 14 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣವನ್ನು ಖಾತರಿಪಡಿಸಿದರೂ, ಕಾಯಿದೆಯ ಜಾರಿಯ ಸಾಧ್ಯಾಸಾಧ್ಯತೆ ಕುರಿತು ಅಲ್ಲಲ್ಲಿ ಅಪಸ್ವರ ಕೇಳಿಬರುತ್ತಿದೆ. ಬಹಳ ಮುಖ್ಯವಾಗಿ ಕಾಯಿದೆಯಲ್ಲಿರುವ ವಿಚಾರಗಳನ್ನು ಜನ ಸಮುದಾಯಗಳಿಗೆ ತಲುಪಿಸುವ ಮತ್ತು ತಮ್ಮ ಪಾತ್ರದ ಬಗ್ಗೆ ಸರ್ಕಾರದ ಅಧಿಕಾರಿಗಳು ಮತ್ತು ಅದರಲ್ಲೂ ಶಿಕ್ಷಕ ವರ್ಗಕ್ಕೆ ಮನನ ಮಾಡಿಸುವ ಕೆಲಸದ ಅಗತ್ಯತೆಯ ಬಗ್ಗೆ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಶಿಕ್ಷಣದ ಹಕ್ಕಿನ ಪ್ರಚಾರಕಾರ್ಯದಲ್ಲಿ ತೊಡಗಿರುವ 'ಪಡಿ' ಸಂಸ್ಥೆಯ ಶ್ರೀಮತಿ ಜಯಂತಿ ವಿವರಿಸಿದರು. ಮಕ್ಕಳು ಶಾಲೆಯಿಂದ ಹೊರಗಿರುವುದರಿಂದ ಆಗಿರುವ ತೊಂದರೆಗಳು, ಬಾಲಕಾರ್ಮಿಕರ ಪರಿಸ್ಥಿತಿ, ವಲಸೆ ಕಾರ್ಮಿಕರ ಮಕ್ಕಳ ಅವಸ್ಥೆಯ ಬಗ್ಗೆ ಹೇಳುತ್ತಾ ಅವರು, ಶಿಕ್ಷಣದ ಸಾರ್ವತ್ರೀಕರಣದ ಮತ್ತು ಸಮಾನಶಾಲೆಯ ಆವಶ್ಯಕತೆಯ ಬಗ್ಗೆ ಪಡಿಯ ಅನುಭವಗಳ ಹಿನ್ನೆಲೆಯಲ್ಲಿ ಒತ್ತಾಯಿಸಿದರು.

**ಮಕ್ಕಳ ಹಕ್ಕುಗಳ ಸಂಘ:** ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆ 2002ರಲ್ಲೇ ಸುತ್ತೋಲೆಯೊಂದನ್ನು ಹೊರಡಿಸಿ, ಎಲ್ಲ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಸಂಘಗಳನ್ನು ಏರ್ಪಡಿಸಿ, ಮಕ್ಕಳಿಗೆ ಭಾಗವಹಿಸುವ ಹಕ್ಕಿನ ಸಮರ್ಥ ಪರಿಚಯ ಮಾಡಲು ಅವಕಾಶಗಳನ್ನು ಸೃಷ್ಟಿಸಬೇಕೆಂದು ತಿಳಿಸಿದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಹಲವಾರು ಶಾಲೆಗಳಲ್ಲಿ ಮಕ್ಕಳ ಸಂಘಗಳು ಆರಂಭವಾಗಿದೆ. ಆದರೂ, ಶಿಕ್ಷಕ ವರ್ಗಕ್ಕೆ ಇದರ ಸಂಪೂರ್ಣ ಮಾಹಿತಿ, ಅರಿವು ಇಲ್ಲದಿರುವುದು ಅಲ್ಲಲ್ಲಿ ನಡೆಸಿರುವ ಕಿರು ಸಮೀಕ್ಷೆಗಳಿಂದ ವ್ಯಕ್ತವಾಗಿದೆ ಎಂದು ತಮ್ಮ ಅನುಭವಗಳನ್ನು ಧಾರವಾಡದ, ಕಿಡ್ಸ್ ಸಂಸ್ಥೆಯ ಶ್ರೀಮತಿ ಸುಜಾತ ಎಮ್ ಬಣಕರ್ ಹೇಳಿದರು. ಇದಕ್ಕಾಗಿ, ಶಿಕ್ಷಕ ವರ್ಗಕ್ಕೆ ಮಕ್ಕಳ ಹಕ್ಕುಗಳ ಬಗ್ಗೆ ಮಾಹಿತಿ ನೀಡುತ್ತಲೇ, ಅವರ ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಸಂಘಗಳನ್ನು ಸ್ಥಾಪಿಸಿ, ವಿವಿಧ ರೀತಿಯ ಚಟುವಟಿಕೆಗಳಲ್ಲಿ ಮಕ್ಕಳನ್ನು ತೊಡಗಿಸುವುದು ಮತ್ತು ಮಕ್ಕಳ ಹಕ್ಕುಗಳ ವಿಶೇಷ ಗ್ರಾಮಸಭೆಯಲ್ಲಿ ಮಕ್ಕಳು ಪಾಲ್ಗೊಳ್ಳುವಂತೆ ಪ್ರೇರೇಪಿಸುವ ಕೆಲಸಗಳನ್ನು ಕಿಡ್ಸ್ ನಡೆಸುತ್ತಿದೆ ಎಂದು ಅವರು ವಿವರಿಸಿದರು. ಮಕ್ಕಳಿಗೆ ಸಾಂಘಿಕ ಚಟುವಟಿಕೆಗಳಲ್ಲಿ ತೊಡಗಲು ಅವಕಾಶ ಸಿಕ್ಕಲ್ಲಿ ಅವರಲ್ಲಿ ನಾಯಕತ್ವ ಗುಣದ ಬೆಳವಣಿಗೆ ಆಗುತ್ತಿರುವುದು, ಮಕ್ಕಳು ತಮಗೆ ಸಂಬಂಧಿಸಿದ ಸಮಸ್ಯೆಗಳನ್ನು ಬಗೆಹರಿಸಲು ಶಾಲಾ ಶಿಕ್ಷಕವರ್ಗಕ್ಕೆ ಒತ್ತಾಯಿಸುವುದು ಹಾಗೂ ಶಾಲೆ ಬಿಡುವ ಮಕ್ಕಳನ್ನು ಗುರುತಿಸುವುದೇ ಮೊದಲಾದ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಇಂತಹ ಮಕ್ಕಳ ಹಕ್ಕುಗಳ ಸಂಘಗಳನ್ನು ರಾಜ್ಯದ ಎಲ್ಲ ಶಾಲೆಗಳಲ್ಲಿ ಆಯೋಜಿಸಲೇಬೇಕೆಂದು ಅವರು ಆಶಿಸಿದರು.

**ದೇವದಾಸಿ ಪದ್ಧತಿ:** ರಾಜ್ಯ ಸರ್ಕಾರವು ದೇವದಾಸಿ ಪದ್ಧತಿ ನಿಂತಿದೆ ಎಂದರೂ, ಈಗಲೂ ಅನೇಕ ಜಿಲ್ಲೆಗಳಲ್ಲಿ ಹಿಂದುಳಿದ ಜಾತಿಗಳ ಕುಟುಂಬಗಳು ಕದ್ದುಮುಚ್ಚಿ ತಮ್ಮ ಹೆಣ್ಣು ಮಕ್ಕಳನ್ನು ದೇವದಾಸಿಯರನ್ನಾಗಿಸುತ್ತಿದ್ದಾರೆ ಎಂದು ಧಾರವಾಡದ, ಮಾಸ್ ಸಂಸ್ಥೆಯ ಶ್ರೀಮತಿ ಐರಾವತಿಯವರು ಹೇಳಿ, ಮಕ್ಕಳನ್ನು ರಕ್ಷಿಸುವ ಕೆಲಸ ಇನ್ನೂ ಹೆಚ್ಚಿನ ಪರಿಣಾಮಕಾರಿಯಾಗಿ ಆಗಬೇಕೆಂದು ಆಗ್ರಹಿಸಿದರು. ಈ ಹಿಂದೆ ಸರ್ಕಾರ ಮತ್ತು ಸ್ವಯಂಸೇವಾ ಸಂಘಟನೆಗಳು ಮಾಡಿರುವ ಪ್ರಯತ್ನಗಳ ಫಲವಾಗಿ, ದೇವದಾಸಿ ಪದ್ಧತಿಗೆ ಮಕ್ಕಳನ್ನು ಗುರಿಯಾಗಿಸುವುದರ ಬಗ್ಗೆ ಮತ್ತು ಅದರಿಂದಾಗುವ ಅಪಾಯಗಳ ಬಗ್ಗೆ ಜನರಲ್ಲಿ ಅರಿವು ಸಾಕಷ್ಟು ಮೂಡಿದೆ ಎಂದೂ ಅವರು ಹೇಳಿದರು. ಆದರೂ, ಪಟ್ಟಬದ್ಧ ಹಿತಾಸಕ್ತಿಗಳು, ತಮ್ಮ ಲಾಭಕ್ಕಾಗಿ ಮತ್ತು ಕೆಲವೊಮ್ಮೆ ಪೋಷಕರಲ್ಲಿರುವ ಮೌಢ್ಯ ಹಾಗೂ ದುರಾಷೆಯಿಂದಾಗಿ ಚಿಕ್ಕಮಕ್ಕಳು ದೇವದಾಸಿ ಪದ್ಧತಿಗೆ ಬಲಿಯಾಗುತ್ತಿರುವುದು ವಾಸ್ತವವೆಂದರು. ದೇವದಾಸಿ ಪುನರ್ವಸತಿಯಿಂದಾಗಿ ಆಗಿರುವ ಪ್ರಯೋಜನಗಳು ಒಳ್ಳೆಯದ್ದೇ ಆಗಿದೆ, ಆದರೂ ಇನ್ನೂ ಸಾವಿರಾರು ಜನರಿಗೆ ಇದರ ಪ್ರತಿಫಲ ದೊರಕಬೇಕಿದೆ ಎಂದೂ ಅವರು ಒತ್ತಾಯಿಸಿದರು. ಇಂದಿನ ತುರ್ತು, ದೇವದಾಸಿಯರ ಮಕ್ಕಳಿಗೆ ಭವಿಷ್ಯ ನಿರ್ಮಾಣಕ್ಕೆ ಬೇಕಾದ ವ್ಯವಸ್ಥೆಗಳನ್ನು ನಿರ್ವಂಚನೆಯಿಂದ ಸಂಬಂಧಿತ ಇಲಾಖೆಗಳು ನಡೆಸಿಕೊಡಬೇಕು ಹಾಗೂ ಆ ಮಕ್ಕಳು ಯಾವುದೇ ರೀತಿಯ ತಾರತಮ್ಯಕ್ಕೆ ಗುರಿಯಾಗದಂತೆ, ಮಕ್ಕಳ ಹಕ್ಕುಗಳನ್ನು ರಕ್ಷಿಸುವ ವಿಶೇಷ ದೃಷ್ಟಿಯಿಂದ ಅವರನ್ನು ನಡೆಸಿಕೊಳ್ಳಬೇಕೆಂದೂ ಅವರು ಕೋರಿದರು.

**ಅಂಗವಿಕಲತೆ ಮತ್ತು ಮಕ್ಕಳ ಹಕ್ಕುಗಳು:** ರಾಜ್ಯದ ವಿವಿಧ ಭಾಗಗಳಲ್ಲಿ ಅಂಗವಿಕಲತೆ ತಡೆ ಮತ್ತು ಅಂಗವಿಕಲತೆ ಇರುವವರ ಹಕ್ಕುಗಳ ರಕ್ಷಣೆ ಮತ್ತು ಪುನರ್ವಸತಿ, ತರಬೇತಿ, ಉದ್ಯೋಗವಕಾಶಗಳ ಸೃಷ್ಟಿಯೇ

ಮೊದಲಾದ ಕೆಲಸಗಳಲ್ಲಿ ತೊಡಗಿರುವ ಮೊಬಿಲಿಟಿ ಸಂಸ್ಥೆಯ ಪರವಾಗಿ ಮಾತನಾಡಿದ ಶ್ರೀಮತಿ ಕಮಲ ಅವರು ಬಹಳ ನೋವಿನಿಂದ ಹೇಳಿದ ವಿಚಾರ, ಅಂಗವಿಕಲತೆ ಇರುವ ಬಡ ಮಕ್ಕಳು ಈಗಲೂ ಅನುಭವಿಸುತ್ತಿರುವ ತಾರತಮ್ಯ. ಸರ್ಕಾರದಲ್ಲಿ ಅಂಗವಿಕಲತೆಯಿರುವವರ ಶ್ರೇಯೋಭಿವೃದ್ಧಿಗಾಗಿ ವಿಶೇಷವಾದ ಇಲಾಖೆ ಇದ್ದರೂ, ಆ ಇಲಾಖೆ ಇತರ ಇಲಾಖೆಗಳ ಕೆಲಸಗಳೊಂದಿಗೆ ಸಮನ್ವಯತೆ ಇಟ್ಟುಕೊಳ್ಳದಿರುವುದರಿಂದ ಅಂಗವಿಕಲತೆ ಇರುವ ಮಕ್ಕಳಿಗೆ ಸೂಕ್ತವಾದ ಉಪಕಾರವಾಗುತ್ತಿಲ್ಲ ಎಂದು ಹೇಳಿದರು. ಹಲವಾರು ಪ್ರಕರಣಗಳನ್ನು ಸಭೆಯೆದುರು ಬಿಚ್ಚಿಟ್ಟ ಅವರು, ಅಂಗವಿಕಲತೆ ತಡೆ ಕೆಲಸಗಳನ್ನು ಸರ್ಕಾರ ಮತ್ತು ಸಮುದಾಯ ಯುದ್ಧೋಪಾದಿಯಲ್ಲಿ ಮಾಡದಿದ್ದರೆ, ಈಗಿರುವ ಸಂಖ್ಯೆಗಳಿಗಿಂತಲೂ ಇನ್ನೂ ಹತ್ತಾರು ಪಾಲು ಹೆಚ್ಚಿನ ಅಂಗವಿಕಲತೆಯಿರುವವರನ್ನು ಸಮಾಜ ಮುಂದೆ ಸಂಬಾಳಿಸಬೇಕಾಗುತ್ತದೆ ಎಂದೂ ಎಚ್ಚರಿಕೆಯಿತ್ತರು. ಅಂಗವಿಕಲತೆ ಇರುವ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿದ್ದು ಎಲ್ಲ ಸೇವೆಗಳು ಪ್ರತಿ ಗ್ರಾಮ ಪಂಚಾಯಿತಿಗಳ ಮಟ್ಟಕ್ಕೆ ತಲುಪುವುದು ಈಗಿನ ತುರ್ತು ಎಂದು ಪುನರುಚ್ಚರಿಸಿದರು.

**ಹೆಚ್.ಐ.ವಿ.ಬಾಧಿತ ಮಕ್ಕಳು:** ಹೆಚ್.ಐ.ವಿ.ಸೋಂಕಿನಿಂದಾಗಿ ತೊಂದರೆಗೊಳಗಾಗಿರುವ ಮಕ್ಕಳ ಪುನರ್ವಸತಿ, ನೆಮ್ಮದಿಯ ಜೀವನ ನಡೆಸಲು ಅವಕಾಶಗಳನ್ನು ಸೃಷ್ಟಿಸಬೇಕೆಂದು ಆಂದೋಲನವನ್ನೇ ನಡೆಸುತ್ತಿರುವ ಬಿಜಾಪುರದ ಉಜ್ವಲ ಸಂಸ್ಥೆಯ ಶ್ರೀ ವಾಸುದೇವ ತೋಳಬಂದಿಯವರು, ಈ ಮಕ್ಕಳ ಹಕ್ಕುಗಳ ಪರಿಸ್ಥಿತಿಯ ಬಗ್ಗೆ ತಮ್ಮ ಅಂತಃಕರಣವನ್ನು ಬಿಚ್ಚಿಟ್ಟರು. ಹೆಚ್.ಐ.ವಿ. ಸೋಂಕಿನಿಂದ ಬಳಲುವ ಮಕ್ಕಳು ಮತ್ತು ಪೋಷಕರಿಗೆ ಈ ಸೋಂಕಿದ್ದು ಅದರ ಪರಿಣಾಮವನ್ನು ಎದುರಿಸುತ್ತಿರುವ ಮಕ್ಕಳಿಗಾಗಿ ಸರ್ಕಾರ ಇಲ್ಲಿಯವರೆಗೂ ಯಾವುದೇ ಗಂಭೀರ ಪ್ರಯತ್ನಗಳನ್ನು ನಡೆಸಿಲ್ಲ ಎಂದು ನೇರವಾಗಿ ಹೇಳಿದ ವಾಸುದೇವ ತೋಳಬಂದಿಯವರು, ಸ್ವಯಂಸೇವಾ ಸಂಘಟನೆಗಳು ನಡೆಸಿರುವ ಪ್ರಯತ್ನಗಳು ಸಂಪೂರ್ಣವಾಗಿ ಸಮರ್ಪಕವಾಗಿಲ್ಲವೆಂದೂ, ಎಲ್ಲರೂ ಒಂದಲ್ಲಾ ಒಂದು ರೀತಿಯ ಕೊರತೆಗಳನ್ನು ಎದುರಿಸುತ್ತಿರುವುದಾಗಿ ಹೇಳಿದರು. ನಮ್ಮ ವಯಸ್ಕ ಸಮಾಜದ ಬೇಜವಾಬ್ದಾರಿ ಮುಗ್ಧ ಮಕ್ಕಳ ಮೇಲಾಗುತ್ತಿದೆ ಎಂದ ಅವರು, ಭಾರತದ ಯುವ ಸಮಾಜ ಈಗ ಎಚ್ಚರಿಕೆ ವಹಿಸದಿದ್ದಲ್ಲಿ, ಆಫ್ರಿಕಾದ ದೇಶಗಳು ಎದುರಿಸಿದ ಸಮಸ್ಯೆಗಿಂತಲೂ ಭಯಂಕರವಾದ ಪರಿಣಾಮವನ್ನು ನೋಡಬೇಕಾಗುತ್ತದೆ ಎಂದೂ ಎಚ್ಚರಿಸಿದರು. ಪ್ರತಿಯೊಂದು ಮಾಧ್ಯಮವೂ, ಪ್ರತಿಯೊಂದು ಸಂಸ್ಥೆಯೂ, ಪ್ರತಿಯೊಂದು ಕುಟುಂಬ, ವ್ಯಕ್ತಿಗಳೂ ತಮಗೆ ಹೆಚ್.ಐ.ವಿ.ಯ ಭೀತಿಯಿಲ್ಲದಿದ್ದರೂ, ಈ ಸೋಂಕಿನ ಪರಿಣಾಮದಿಂದ ನೊಂದುತ್ತಿರುವ ಮಕ್ಕಳ ಬಗ್ಗೆ ಕಾಳಜಿ ವ್ಯಕ್ತಪಡಿಸಬೇಕೆಂದರು. ಬಿಜಾಪುರದಲ್ಲಿ ತಾವು ನಡೆಸುತ್ತಿರುವ ಮಕ್ಕಳ ಧಾಮದ ಅನುಭವಗಳನ್ನು ಹಂಚಿಕೊಂಡ ವಾಸು ಅವರು, ಸಮುದಾಯ ಮನಸ್ಸು ಮಾಡಿದರೆ, ಮಕ್ಕಳಿಗೆ ರಕ್ಷಣೆ ನೀಡಬಹುದು ಎಂಬ ಆಶಾಭಾವನೆ ವ್ಯಕ್ತಪಡಿಸಿದರು.

**ಸಮೂಹ ಮಾಧ್ಯಮಗಳು ಮತ್ತು ಮಕ್ಕಳ ಹಕ್ಕುಗಳು:** ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯದ ಸಮುದಾಯ ಬಾನುಲಿ, ರೇಡಿಯೋ ಆಕ್ಟಿವ್‌ನ ತಂಡವು ಮಕ್ಕಳ ಹಕ್ಕುಗಳ ಬಗ್ಗೆ ತಾವು ನಡೆಸುತ್ತಿರುವ ಕಾರ್ಯಕ್ರಮಗಳು ಮತ್ತು ಪ್ರಸಾರಗಳ ಬಗ್ಗೆ ವಿವರವಾಗಿ ಹಂಚಿಕೊಂಡರು. ಕಳೆದ ಎರಡು ವರ್ಷಗಳಿಂದ ಮುದ್ರಣ ಮತ್ತು ದೃಷ್ಯ ಮಾಧ್ಯಮದೊಡನೆ ರೇಡಿಯೋ ಕಾರ್ಯಕ್ರಮಗಳ ಮೂಲಕ ಸಮುದಾಯದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಮಾಹಿತಿ ನೀಡುತ್ತಿರುವುದರ ಬಗ್ಗೆ ತಂಡ ಹಂಚಿಕೊಂಡಿತು. ಸಂಭಾಷಣೆ, ಭಾಷಣ, ನಾಟಕ, ಹಾಡು, ಸಂದರ್ಶನಗಳು ಮತ್ತು ಮಾಹಿತಿ ಹಂಚಿಕೆಗಳ ಮೂಲಕ ರೇಡಿಯೋ ಆಕ್ಟಿವ್ ತನ್ನ ನಿರ್ದಿಷ್ಟ ಕೇಳುಗರನ್ನು ತಲುಪುತ್ತಿದೆ. ಮುಂದಿನ ವರ್ಷಗಳಲ್ಲಿ ಇನ್ನೂ ವಿವಿಧ ಮತ್ತು ವಿಶಿಷ್ಟವಾದ ಕಾರ್ಯಕ್ರಮಗಳನ್ನು ನಡೆಸಲು ರೇಡಿಯೋ ಆಕ್ಟಿವ್ ಮುಂದೆ ಬಂದಿದೆ.

**ಸಮಾರೋಪ:** ಮಕ್ಕಳ ಹಕ್ಕುಗಳನ್ನು ನೆನೆಪಿಸಿಕೊಳ್ಳಲು ಕೇವಲ ದಿನಾಚರಣೆಗಳನ್ನು ಮಾಡಿದರೆ ಸಾಲದು, ಮಕ್ಕಳ ಪರಿಸ್ಥಿತಿಗಳ ಬಗ್ಗೆ ಪ್ರತಿದಿನ ಪ್ರತಿಯೊಬ್ಬರೂ ಚಿಂತಿಸುತ್ತಿರಬೇಕು ಹಾಗೂ ಕ್ರಮ ಕೈಗೊಳ್ಳಬೇಕೆಂದು ಸಭೆ ಭಾವಿಸಿತು. ಮುಂದಿನ ವರ್ಷಗಳಲ್ಲಿ ಮಕ್ಕಳ ಹಕ್ಕುಗಳ ನಿಗಾ ಕೇಂದ್ರವು ಇನ್ನೂ ಹೆಚ್ಚಿನ ಕಾರ್ಯಕ್ರಮಗಳ ಮೂಲಕ ಸಂಸ್ಥೆಗಳ ಸಾಮರ್ಥ್ಯವನ್ನು ವೃದ್ಧಿಸುವ ಕೆಲಸಗಳು ಹಾಗೂ ವಕೀಲಿ ಕೆಲಸಗಳನ್ನು ಕೈಗೊಳ್ಳಲು ನಿರ್ಧರಿಸಲಾಯಿತು. ಇದೇ ಸಂದರ್ಭದಲ್ಲಿ ಸಮಾಜಕಾರ್ಯದ ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ಮಕ್ಕಳ ಹಕ್ಕುಗಳನ್ನು ಕುರಿತು ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

## ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಸಲಹಾ ಸಮಿತಿಯ ಸದಸ್ಯರು

| | |
|---|---|
| ಡಾ. ಹೆಚ್ ಸುದರ್ಶನ್ | ಶ್ರೀಮತಿ ಇ.ವಿ. ಶಾಂತಾ |
| ಡಾ. ಕಮಲಾ ಗೋಪಾಲರಾವ್ | ಡಾ. ಶ್ರೀಲಕ್ಷ್ಮಿ ಗುರುರಾಜ |
| ಶ್ರೀ ಸ್ಯಾಮುಯಲ್ ಪೌಲ್ | ಶ್ರೀ ವಿನೋದ್ ವ್ಯಾಸುಲು |
| ಡಾ. ಉಷಾ ಅಬ್ರೋಲ್ | ಡಾ. ನಂದಿನಿ ಮುಂಡ್ಕುರ್ |
| ಡಾ. ಆಶಾ ಬೆನಕಪ್ಪ | ಶ್ರೀಮತಿ ನೀನಾ ನಾಯಕ್ |
| ಶ್ರೀಮತಿ ತಾರಾ | ಪ್ರೊ. ಮರುಳಸಿದ್ಧಯ್ಯ ಹೆಚ್. ಎಂ. |
| ಶ್ರೀಮತಿ ಅರ್ಚನಾ ಮೆಹಂದಾಲೆ | ಶ್ರೀ ಮ್ಯಾಥ್ಯೂ ಫಿಲಿಪ್ಸ್ |
| ಡಾ. ಟಿ.ಎಸ್. ಚಂದ್ರಶೇಖರ್ | ಶ್ರೀ ಲಕ್ಷ್ಮಾಪತಿ |
| ಶ್ರೀಮತಿ ಶೀಲಾ ದೇವರಾಜ್ | ಶ್ರೀಮತಿ ಸಿಂಥಿಯಾ ಸ್ಟೀಫನ್ |
| ಶ್ರೀಮತಿ ಶೀಲಾ ರಾಮನಾಥನ್ | ಶ್ರೀಮತಿ ವಾಣಿ ಪೆರಿಯೋಡಿ |
| ಶ್ರೀ ವಿ.ಎನ್. ಸುಬ್ಬಾರಾವ್ | ಶ್ರೀ ಪ್ರಮೋದ್ ಕುಲಕರ್ಣಿ |

# ಕರ್ನಾಟಕದ ಮಕ್ಕಳು ಮತ್ತು ಅಂಕಿ ಅಂಶಗಳು

ನಮ್ಮಲ್ಲಿ ಬಹುತೇಕರಿಗೆ ಅಂಕಿಅಂಶಗಳೆಂದರೆ ಅಲರ್ಜಿ! ಸಾಮಾನ್ಯವಾಗಿ ಲೇಖನಗಳನ್ನು ಓದುವಾಗ ಅಂಕಿಅಂಶಗಳ ಕುರಿತು ಗಮನ ನೀಡುವುದೇ ಇಲ್ಲ. ಆದರೆ ಅಂಕಿಅಂಶಗಳಿಗೆ ವಿವಿಧ ಸನ್ನಿವೇಶಗಳ ಹಿನ್ನೆಲೆಯಲ್ಲಿ ಹೆಚ್ಚಿನ ಮಹತ್ವವಿದೆ. ಹಾಗಾಗಿ ಸರ್ಕಾರಿ ಇಲಾಖೆಗಳು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸಂಸ್ಥೆಗಳು ಕಾಲಕಾಲಕ್ಕೆ ಬಿಡುಗಡೆ ಮಾಡುವ ಮಕ್ಕಳ ಕುರಿತಾದ ಅಂಕಿಅಂಶಗಳನ್ನು ಅರ್ಥವಾಡಿಕೊಳ್ಳಲು ನಾವು ಸಮರ್ಥರಿರಬೇಕು. ಉದಾಹರಣೆಗೆ ರಾಷ್ಟ್ರಮಟ್ಟದಲ್ಲಿ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ, Sample Registration System, ಮೊದಲಾದವುಗಳು. ಹಾಗೆಯೇ ರಾಜ್ಯಮಟ್ಟದಲ್ಲಿ District L Survey-Reproduction Child Health ಮೊದಲಾದ ಸಮೀಕ್ಷೆಗಳು ನಿಗದಿತ ಅವಧಿಯಲ್ಲಿ ಅಂಕಿಅಂಶಗಳನ್ನು ಬಿಡುಗಡೆ ಮಾಡುತ್ತಿವೆ. ಈ ಎಲ್ಲಾ ಅಂಕಿಅಂಶಗಳನ್ನು ಸಂಗ್ರಹಿಸಿ ಓದುಗರಿಗೆ ಅರ್ಥವಾಗುವಂತೆ ಅವುಗಳನ್ನು ಮಂಡಿಸುವುದು ಬಹು ಮುಖ್ಯ.

ನಮ್ಮ ರಾಷ್ಟ್ರ ಮತ್ತು ರಾಜ್ಯದಲ್ಲಿ ಮಕ್ಕಳ ಕ್ರಿಯಾ ಯೋಜನೆಗಳಿವೆ. ಈ ಕ್ರಿಯಾ ಯೋಜನೆಗಳನ್ನು ಸರ್ಕಾರಗಳು ನಿರ್ದಿಷ್ಟ ಗುರಿಗಳೊಂದಿಗೆ ಇಟ್ಟುಕೊಂಡಿವೆ. ಆ ಗುರಿಗಳನ್ನು ತಲುಪಲು ತೆಗೆದುಕೊಳ್ಳುವ ಕ್ರಮಗಳನ್ನೂ ನೀಡಿವೆ. ಜೊತೆಗೆ ಸಹಸ್ರಮಾನದ ಅಭಿವೃದ್ಧಿ ಗುರಿಗಳು, ಮಕ್ಕಳಿಗೆ ಸೂಕ್ತವಾದ ಜಗತ್ತು ಇನ್ನಿತರ ಅಂತಾರಾಷ್ಟ್ರೀಯ ನಿಲುವಿಗೆ ಭಾರತವೂ ಬದ್ಧವಾಗಿದೆ. ಇವೆಲ್ಲವೂ ನಿರ್ದಿಷ್ಟ ಅವಧಿಯಲ್ಲಿ ಸಾಧಿಸಬೇಕಾದ ಗುರಿಗಳನ್ನು ಹೊಂದಿವೆ.

ಆದರೆ ಯಾವುದೇ ರಾಷ್ಟ್ರ, ರಾಜ್ಯಗಳು ಈ ಗುರಿಗಳನ್ನು ತಲುಪುವ ನಿಟ್ಟಿನಲ್ಲಿವೆಯೇ ಅಥವಾ ಇಲ್ಲವೇ ಎಂಬುದನ್ನು ಕಂಡುಕೊಳ್ಳಲು ಅಂಕಿ ಅಂಶಗಳ ವಿಶ್ಲೇಷಣೆ ಆವಶ್ಯಕ. ಇಲ್ಲದಿದ್ದರೆ ಸಾಧಿಸಿರುವ ಅಥವಾ ಸಾಧಿಸಬೇಕಾಗಿರುವ ಪ್ರಗತಿಯನ್ನು ಅಳೆಯಲು ಸಾಧ್ಯವಾಗುವುದಿಲ್ಲ. 1992ರಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ಭಾರತ ಸರ್ಕಾರ ಸಹಿ ಮಾಡಿ ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಬದ್ಧವಾಗಿದೆ. ರಾಷ್ಟ್ರದಲ್ಲಿ ಮಕ್ಕಳ ಹಕ್ಕುಗಳ ಜಾರಿಗಾಗಿ ತಾನು ಕೈಗೊಂಡಿರುವ ಕ್ರಮಗಳನ್ನು ಕುರಿತು ಕಾಲಕಾಲಕ್ಕೆ ವಿಶ್ವಸಂಸ್ಥೆಗೆ ತನ್ನ ವರದಿಯನ್ನು ನೀಡಬೇಕಿದೆ. ಈ ವರದಿಯಲ್ಲೂ ಅಂಕಿಅಂಶಗಳು ವಿಶೇಷವಾದ ಪಾತ್ರವನ್ನು ವಹಿಸುತ್ತವೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರವು ಹಲವಾರು ವರ್ಷಗಳಿಂದ ಮಕ್ಕಳ ಕುರಿತಂತೆ ರಾಷ್ಟ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದ ಅಂಕಿಅಂಶಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿಸುವುದರ ಜೊತೆಗೆ ಕಾಲಕಾಲಕ್ಕೆ ನವೀಕರಿಸಿ ಜಾಲದ ಎಲ್ಲ ಸದಸ್ಯರಿಗೂ ತಲುಪಿಸುತ್ತಿದೆ. ಈ ಅಂಕಿಅಂಶಗಳನ್ನು ಸ್ವಯಂಸೇವಾ ಸಂಸ್ಥೆಗಳು, ಶೈಕ್ಷಣಿಕ ಸಂಸ್ಥೆಗಳು, ಮಾಧ್ಯಮದವರು, ಶಾಸಕರು ಹಾಗು ಮತ್ತಿತರರು ವಿವಿಧ ಸಂದರ್ಭಗಳಲ್ಲಿ ಬಳಸುತ್ತಿದ್ದಾರೆ. ಈ ಅಂಕಿಅಂಶಗಳ ಆಧಾರದ ಮೇಲೆ ಹಲವಾರು ಜಿಲ್ಲೆಗಳ ಸ್ವಯಂಸೇವಾ ಸಂಸ್ಥೆಗಳು 2008ರಲ್ಲಿ ಮಕ್ಕಳ ಹಕ್ಕುಗಳ ಪರವಾದ ಚುನಾವಣಾ ಪೂರ್ವ ಆಂದೋಲನವನ್ನು ನಡೆಸಿದ್ದವು ಎನ್ನುವುದು ಗಮನಾರ್ಹ.

ಈ ಎಲ್ಲಾ ಅಂಕಿಅಂಶಗಳು ಲಭ್ಯವಿರುವುದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ. ರಾಜ್ಯಮಟ್ಟದಲ್ಲೂ ಹಲವಾರು ಅಂಕಿಅಂಶಗಳು ಲಭ್ಯವಿವೆ ಮತ್ತು ಜಿಲ್ಲಾ ಮಟ್ಟದಲ್ಲಿ ಕೆಲವೇ ಕೆಲವು ಸೂಚಕಗಳ ಮಾಹಿತಿ ಲಭ್ಯವಿದೆ. ಆದರೆ ತಾಲ್ಲೂಕು ಮತ್ತು ಪಂಚಾಯಿತಿ ಮಟ್ಟದಲ್ಲಿ ಮಕ್ಕಳ ಕುರಿತಾದ ಅಂಕಿಅಂಶಗಳು ಸಿಗುವುದೇ ಇಲ್ಲ ಅಥವಾ ಸಿಕ್ಕರೂ ಅವು ಎಲ್ಲರಿಗೂ ಲಭ್ಯವಾಗುವುದಿಲ್ಲ.

ಇದರ ಜೊತೆಯಲ್ಲಿ ಬಹುಮುಖ್ಯವಾಗಿ ಗಮನಿಸಬೇಕಿರುವುದು ಯಾವುದೇ ಗುರಿಗಳನ್ನು ತಲುಪಲು ಅನೇಕ ಕಾರ್ಯಕ್ರಮಗಳು, ಯೋಜನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಯೋಜನೆಗಳೂ ಜಾರಿಯಲ್ಲಿರುತ್ತವೆ. ಆದರೆ ಈ ಯೋಜನೆಗಳಿಗೆ ನಿಗದಿಗೊಳಿಸಿದ ಹಣ ಮತ್ತು ಅದರ ಬಳಕೆಯನ್ನೂ ಪರಿಶೀಲಿಸಬೇಕಾಗುತ್ತದೆ. ಹಾಗಾಗಿ ಜಿಲ್ಲಾ, ತಾಲ್ಲೂಕು ಮತ್ತು ಪಂಚಾಯಿತಿ ಮಟ್ಟದ ಆಯವ್ಯಯವನ್ನು ಮಕ್ಕಳ ಹಕ್ಕುಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಬೇಕಾದ ಆವಶ್ಯಕತೆ ಇದೆ.

ಈ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಉದ್ದೇಶ ಎಲ್ಲಾ ಸ್ವಯಂಸೇವಾ ಸಂಸ್ಥೆಗಳಿಗೆ ಅಂಕಿಅಂಶಗಳ ಸಂಗ್ರಹಣೆ, ವಿಶ್ಲೇಷಣೆಗಳ ಕುರಿತು ಜಾಲದ ಸದಸ್ಯ ಸಂಸ್ಥೆಗಳ ಪರಿಣಿತಿ ಬೆಳೆಸುವುದಾಗಿದೆ. ಆಗ ಪಂಚಾಯಿತಿ ಮಟ್ಟದಲ್ಲಿ ಲಭ್ಯವಿರುವ ಅಂಕಿಅಂಶಗಳ ವಿಶ್ಲೇಷಣೆಯ ಆಧಾರದ ಮೇಲೆ ಕ್ರಿಯಾ ಯೋಜನೆಗಳ ಗುರಿಗಳು, ಸಹಸ್ರಮಾನದ ಅಭಿವೃದ್ಧಿ ಗುರಿಗಳು ಪಂಚಾಯಿತಿ ಮಟ್ಟದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ಹೇಗೆ ಪ್ರಗತಿಯಲ್ಲಿವೆ ಎಂಬುದನ್ನು ಸ್ವಯಂ ಸೇವಾ ಸಂಸ್ಥೆಗಳಿಂದ ಕಂಡುಕೊಳ್ಳಬಹುದು. ಅಲ್ಲದೆ ಇವುಗಳ ಆಧಾರದ ಮೇಲೆ ಸ್ಥಳೀಯವಾಗಿ ವಕೀಲಿ ನಡೆಸಬಹುದು.

ಈ ಹಿನ್ನೆಲೆಯಲ್ಲಿ ಮಕ್ಕಳ ಹಕ್ಕುಗಳ ನಿಗಾ ಕೇಂದ್ರವು ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳಿಗೆ ಅಂಕಿಅಂಶಗಳ ವಿಶ್ಲೇಷಣೆ ಮತ್ತು ಆಯವ್ಯಯ ವಿಶ್ಲೇಷಣೆ ಕುರಿತು ತರಬೇತಿ ನೀಡಲು ವಿಭಾಗಮಟ್ಟದ ಕಾರ್ಯಾಗಾರವನ್ನು ಆಯೋಜಿಸುವ ಆಲೋಚನೆಯಲ್ಲಿದೆ. ಇದಕ್ಕೆ ಸ್ಥಳೀಯ ಸಂಸ್ಥೆಗಳ ಸಹಕಾರ ಅತ್ಯಗತ್ಯ. ಈ ಕಾರ್ಯಾಗಾರಗಳನ್ನು ನಿಗಾ ಕೇಂದ್ರದ ಸಹಯೋಗದೊಡನೆ ಆಯೋಜಿಸಲು ಆಸಕ್ತಿಯಿರುವ ಸಂಸ್ಥೆಗಳು ನಿಗಾ ಕೇಂದ್ರದ ಸಂಚಾಲಕ ಸಂಸ್ಥೆಯಾದ ಚೈಲ್ಡ್ ರೈಟ್ಸ್ ಟ್ರಸ್ಟ್ ಸಂಸ್ಥೆಯನ್ನು ಸಂಪರ್ಕಿಸಬಹುದು.

**ಸಂಪಾದಕ ಮಂಡಳಿ**
ವಾಸುದೇವ ಶರ್ಮಾ
ಸತೀಶ್ ಜಿ.ಸಿ.
ನಾಗಸಿಂಹ ಜಿ ರಾವ್.
ಮಂಜುನಾಥ್ ಎ.ವಿ.
ನಾಗಮಣಿ
ನಾಗರಾಜ್ ಬಿ.ಜಿ.
ರಶ್ಮಿ. ಜಿ.ಎಂ.
ಭವ್ಯ
ಗಿರಿಸ್ವಾಮಿ

**ಸಲಹೆ**
ಡಾ. ಪದ್ಮಿನಿ
ಆನ್ಸಲೆಂ ರೋಜಾರಿಯೊ

**ಸಹಾಯ**
ತನುಜಾ
ರಾಘವೇಂದ್ರ
ಲಕ್ಷ್ಮೀಶ



unicef
CRT CHILD RIGHTS TRUST
KCRO KARNATAKA CHILD RIGHTS OBSERVATORY